

# ಸಿಹಿ ಕಹಿ


ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT



ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI


Cell : +91 9741319119



Volume : 06 Issue : 280 Wednesday 27-03-2024 E-mail : maruti.b.hosamani76@gmail.com Page: 4 Price : Rs. 1/-


# ಕೊಟ್ಟೂರಿನಲ್ಲಿ ಕ್ರಿಕೆಟ್ ಬೆಟ್ಟಿಂಗ್ ವಿರುದ್ಧ ಪ್ರಕರಣ ದಾಖಲು

**ಉಜ್ಜನಿ :** ವಿಜಯನಗರ ಜಿಲ್ಲೆಯ ಕೊಟ್ಟೂರು ತಾಲೂಕಿನ ಕೊಟ್ಟೂರು ಪಟ್ಟಣದ ಉಜ್ಜನಿ ಸರ್ಕಲ್ ಹತ್ತಿರ ವಾಲ್ ಕಟ್ಟೆಯ ಬಳಿ ದಿನಾಂಕ 25 ಮಾರ್ಚ್ 2024 ರಂದು ಸಾರ್ವಜನಿಕ ಸ್ಥಳದಲ್ಲಿ ಕ್ರಿಕೆಟ್ ಬೆಟ್ಟಿಂಗ್ ಜೂಜಾಟ ನಡೆಯುತ್ತಿರುವುದಾಗಿ ಖಚಿತ ಮಾಹಿತಿಯ ಮೇರೆಗೆ ಶ್ರೀ ಅರಿಬಾಬು ಮಾನ್ಯ ಎಸ್ ಪಿ ಸಾಹೇಬರು ವಿಜಯನಗರ ಜಿಲ್ಲೆಯ ಶ್ರೀ ಮಲ್ಲೇಶಪ್ಪ ಮಲ್ಲಾಪುರ ಮಾನ್ಯ ಡಿ ವೈ ಎಸ್ ಪಿ ಸಾಹೇಬರು ಕೂಡ್ಲಿಗಿ ವಿಭಾಗ ಸ್ರೀ ವಿಕಾಸ್ ಸಿಪಿಐ ಹೆಚ್ಚಿಹಳ್ಳಿ ಇವರುಗಳ ಮಾರ್ಗದರ್ಶನದ ಮೇರೆಗೆ ಶ್ರೀಮತಿ ಗೀತಾಂಜಲಿ ಸಿಂಧೆ ಪಿಎಸ್ಐ ರವರು ಪಂಚರ ಸಮಕ್ಷಮ ಪಿ ಸಿ 211 ಯರ್ರಿಸ್ವಾಮಿ ಪಿ ಸಿ166 ವೀರೇಶ್ಪಿ ಸಿ 494 ಶಶಿಧರ್ ರವರೊಂದಿಗೆ ಕ್ರಿಕೆಟ್ ಬೆಟ್ಟಿಂಗ್ ಆಟ ನಡೆಯುತ್ತಿದ್ದ ಗೌರಳ್ಳಿ ಬಸವರಾಜ್ ತಂದೆ ಲೇಟ್ ಷಣ್ಮುಖಪ್ಪ 50 ವರ್ಷ ಮುದುಕನಕಟ್ಟಿ ಏರಿಯಾ ಕೊಟ್ಟೂರು ಪಟ್ಟಣ ಇವರು ಹಾಗೂ ಸಂಗಡಿಗರು ಮೇಲೆ ದಾಳಿ ಮಾಡಿ ಇವರಿಗೆ ವಶಕ್ಕೆ ಪಡೆದುಕೊಂಡು,ಈತನಿಂದ ಕ್ರಿಕೆಟ್ ಬೆಟ್ಟಿಂಗ್ಗೆ ಸಂಬಂಧಿಸಿದ 1) 1,500 ನಗದು ಹಣ 2) ಒಂದು ನೋಟ್ ಪುಸ್ತಕ 3)ಒಂದು ಬಾಲ್ ಪೆನ್ 4)20,000 ಬೆಲೆ ಬಾಳುವ ಒಂದು ಸ್ಕ್ರೀನ್ ಟಚ್ ಮೊಬೈಲ್ ಫೋನ್ ಇವುಗಳನ್ನು ಜಪ್ತಿಪಡಿಸಿ ಕೊಳ್ಳಲಾಗಿದ್ದು ಈ ಬಗ್ಗೆ ಕೊಟ್ಟೂರು ಠಾಣೆ ಗುನ್ನೆ ನಂಬರ್: 53/2024 ಕಲಂ. 78 (1) (ಎ)(6) ಕೆ ಪಿ ಯಾಕ್ಟ್ ರಿತ್ಯ ಪ್ರಕರಣ ದಾಖಲಾಗಿರುತ್ತದೆ.



ದಿನಾಂಕ 26-03-2024

ವಿಜಯನಗರ ಜಿಲ್ಲೆ, ಕೊಟ್ಟೂರು ಪೊಲೀಸ್ ಠಾಣೆ.

ಪೊಲೀಸ್ ಪ್ರಕಟಣೆ.

ದಿನಾಂಕ: 25-03-2024 ರಂದು ರಾತ್ರಿ 8-00 ಗಂಟೆಗೆ, ಕೊಟ್ಟೂರು ಪಟ್ಟಣದ ಉಜ್ಜನಿ ಸರ್ಕಲ್ ಹತ್ತಿರ ವಾಲ್ ಕಟ್ಟೆಯ ಬಳಿ, ಸಾರ್ವಜನಿಕ ಸ್ಥಳದಲ್ಲಿ, ಕ್ರಿಕೆಟ್ ಬೆಟ್ಟಿಂಗ್ ಜೂಜಾಟ ನಡೆಯುತ್ತಿರುವುದಾಗಿ ಬಂದ ಖಚಿತ ಮಾಹಿತಿಯ ಮೇರೆಗೆ ಶ್ರೀ ಹರಿಬಾಬು ಮಾನ್ಯ ಎಸ್.ಪಿ.ಸಾಹೇಬರು ವಿಜಯನಗರ ಜಿಲ್ಲೆ, ಶ್ರೀ ಮಲ್ಲೇಶಪ್ಪ ಮಲ್ಲಾಪುರ ಮಾನ್ಯ ಡಿ.ಎಸ್.ಪಿ.ಸಾಹೇಬರು ಕೂಡ್ಲಿಗಿ ಉಪವಿಭಾಗ, ಶ್ರೀ ವಿಕಾಸ್ ಸಿ.ಪಿ.ಐ. ಹೆಚ್.ಬಿ.ಹಳ್ಳಿ ಇವರುಗಳ ಮಾರ್ಗದರ್ಶನದ ಮೇರೆಗೆ, ಶ್ರೀಮತಿ ಗೀತಾಂಜಲಿ ಎಸ್. ಪಿ.ಎಸ್.ಐ. (ಕಾ.ಸು) ರವರು ಪಂಚರ ಸಮಕ್ಷಮ ಪಿ.ಸಿ.211, ಯರ್ರಿಸ್ವಾಮಿ, ಪಿ.ಸಿ.166 ವೀರೇಶ, ಪಿ.ಸಿ.494 ಶಶಿಧರ ರವರೊಂದಿಗೆ ಕ್ರಿಕೆಟ್ ಬೆಟ್ಟಿಂಗ್ ಜೂಜಾಟ ನಡೆಸುತ್ತಿದ್ದ ಗೌರಿಹಳ್ಳಿ ಬಸವರಾಜ ತಂದೆ ಲೇಟ್ ಷಣ್ಮುಖಪ್ಪ, ವ: 50 ವರ್ಷ ವಾಸ. ಮುದುಕನಕಟ್ಟೆ ಏರಿಯಾ ಕೊಟ್ಟೂರು ಪಟ್ಟಣ, ಇವರು ಹಾಗೂ ಸಂಗಡಿಗರು ಮೇಲೆ ದಾಳಿ ಮಾಡಿ, ಇವರಿಗೆ ವಶಕ್ಕೆ ಪಡೆದುಕೊಂಡು ಈತನಿಂದ ಕ್ರಿಕೆಟ್ ಬೆಟ್ಟಿಂಗ್ ಗೆ ಸಂಬಂದಿಸಿದ 1] 1500/- ರೂ ನಗದು ಹಣ, 2] ಒಂದು ನೋಟ್ ಪುಸ್ತಕ, 3] ಒಂದು ಬಾಲ್ ಪೆನ್ನು, 4] 20 ಸಾವಿರ ರೂ ಬೆಲೆ ಒಂದು ಸ್ಕ್ರೀನ್ ಟಚ್ ಮೊಬೈಲ್ ಫೋನ್ ಇವುಗಳನ್ನು ಜಪ್ತುಪಡಿಸಿಕೊಳ್ಳಲಾಗಿದ್ದು, ಈ ಬಗ್ಗೆ, ಕೊಟ್ಟೂರು ಠಾಣೆ ಗುನ್ನೆ ನಂಬರ್ : 53/2024 ಕಲಂ. 78 (1)(ಎ)(6) ಕೆ.ಪಿ.ಯಾಕ್ಟ್ ರೀತ್ಯ ಪ್ರಕರಣ ದಾಖಲಾಗಿರುತ್ತದೆ.

ಅಲ್ಲದೇ ಅದೇ ದಿನ ಇನ್ನೊಂದು ಕ್ರಿಕೇಟ್ ಬೆಟ್ಟಿಂಗ್ ಕೇಸ್ ದಾಖಲು ಮಾಡಿದ್ದು, ಆರೋಪಿತರಾದ ವಿ.ಕೊಟ್ರೇಶ ಮತ್ತು ಸಂಗಡಿಗರ ಮೇಲೆ ದಾಳಿ ಮಾಡಿ ಇವರುಗಳಿಂದ 1] 700/-ರೂ ನಗದು ಹಣ, 2] ಒಂದು ನೋಟ್ ಪುಸ್ತಕ, 3] ಒಂದು ಬಾಲ್ ಪೆನ್ನು, 4] 21 ಸಾವಿರ ರೂ ಬೆಲೆ ಒಂದು ಸ್ಕ್ರೀನ್ ಟಚ್ ಮೊಬೈಲ್ ಫೋನ್ ಇವುಗಳನ್ನು ಜಪ್ತುಪಡಿಸಿಕೊಳ್ಳಲಾಗಿದ್ದು, ಈ ಬಗ್ಗೆ, ಕೊಟ್ಟೂರು ಠಾಣೆ ಗುನ್ನೆ ನಂಬರ್ : 54/2024 ಕಲಂ. 78 (1)(ಎ)(6) ಕೆ.ಪಿ.ಯಾಕ್ಟ್ ರೀತ್ಯ ಪ್ರಕರಣ ದಾಖಲಾಗಿರುತ್ತದೆ.

ಅದಲ್ಲದೆ ಅದೇ ದಿನ ಇನ್ನೊಂದು ಕ್ರಿಕೆಟ್ ಬೆಟ್ಟಿಂಗ್ ಕೇಸ್ ದಾಖಲು ಮಾಡಿದ್ದು ಆರೋಪಿದಾರ ವಿ ಕೊಟ್ರೇಶ್ ಮತ್ತು ಸಂಗಡಿಗರ ಮೇಲೆ ದಾಳಿ ಮಾಡಿ ಇವರುಗಳಿಂದ 1) ಒಂದು ನೋಟ್ ಪುಸ್ತಕ 2) ಒಂದು ಬಾಲ್ ಪೆನ್ 3) 21,000 ಬೆಲೆಬಾಳುವ ಸ್ಕ್ರೀನ್ ಟಚ್ ಮೊಬೈಲ್ ಫೋನ್ ಇವುಗಳನ್ನು ಜಪ್ತಿಪಡಿಸಿ ಕೊಳ್ಳಲಾಗಿದ್ದು ಈ ಬಗ್ಗೆ ನಂಬರ್ 54/2024 ಕಾಲಂ 78 (1) (ಎ)(6) ಕೆಪಿ ಯಾಕ್ಟ್ ರಿತ್ಯ ಪ್ರಕರಣ ದಾಖಲಾಗಿರುತ್ತದೆ.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಪ್ರದೀಪ್.ಕುಮಾರ್.ಸಿ ಕೊಟ್ಟೂರು**

# ಅದ್ದೂರಿಯಾಗಿ ನಡೆದ ಹಟ್ಟಿ ಶ್ರೀ ಗುರು ತಿಪ್ಪೇರುದ್ರಸ್ವಾಮಿ ಜಾತ್ರಾ ಮಹೋತ್ಸವ

**ನಾಯಕನಹಟ್ಟಿ :** ಕರ್ನಾಟಕದ ಪ್ರಮುಖ ಜಾತ್ರಾ ಮಹೋತ್ಸವ ಎಂದೇ ಗುರುತಿಸಿ ಕೊಂಡಿರುವ ನಾಯಕನಹಟ್ಟಿ ಶ್ರೀ ತಿಪ್ಪೇರುದ್ರಸ್ವಾಮಿ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ಸಾಗಿದೆ.

ಭೀಕರ ಬರದ ನಡುವೆಯೂ ಲಕ್ಷಾಂತರ ಭಕ್ತರು ಜಾತ್ರೆಯಲ್ಲಿ ಭಾಗವಹಿಸಿ ಸಮೃದ್ಧ, ಮಳೆ ಮತ್ತು ಬೆಳೆ ನೀಡಲೆಂದು ಶ್ರೀ ಗುರು ತಿಪ್ಪೇರುದ್ರಸ್ವಾಮಿ ಬಳಿ ಪ್ರಾರ್ಥನೆ ಮಾಡಿದರು.

ಜಾತ್ರೆಯಲ್ಲಿ ಪ್ರಮುಖ ಆಕರ್ಷಣೆಯಾಗಿರುವ ಮುಕ್ತಿ ಭಾವುಟಕ್ಕೆ ಸಾಕಷ್ಟು ಪೈಪೋಟಿ ನಡೆಯುತ್ತದೆ. ಪ್ರತಿ ವರ್ಷವೂ ಮುಕ್ತಿ ಭಾವುಟವನ್ನು ಯಾರು, ಎಷ್ಟು ಮೊತ್ತಕ್ಕೆ ಹರಾಜಿನಲ್ಲಿ ಪಡೆದುಕೊಂಡರು ಎನ್ನುವುದು ಭಕ್ತರಲ್ಲಿ ಕುತೂಹಲ ಮೂಡಿಸುತ್ತದೆ.

ಅಂತೆಯೇ ಈ ವರ್ಷ ಅಂದರೆ 2024ರಲ್ಲಿ ನಡೆದ ಶ್ರೀ ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ ಮಾತ್ರೆಯ ಮುಕ್ತಿ ಭಾವುಟ ಬರೋಬ್ಬರಿ 61 ಲಕ್ಷ ರೂ.ಗಳಿಗೆ ಹರಾಜಾಗಿದೆ.

ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರಾದ ಡಿ.ಸುಧಾಕರ್ ರವರು 61 ಲಕ್ಷ ರೂ.ಗಳಿಗೆ ಮುಕ್ತಿ ಭಾವುಟವನ್ನು ಹರಾಜಿನಲ್ಲಿ ಪಡೆದು ಕೊಂಡಿದ್ದಾರೆ.

2022 ರಲ್ಲಿ ಚಳ್ಳಕೆರೆ ಎಪಿಎಂಸಿ ಅಧ್ಯಕರಾಗಿದ್ದ ಟಿ.ಪ್ರಕಾಶ್ 16 ಲಕ್ಷ ರೂ.



ಗಳಿಗೆ, 2021 ರಲ್ಲಿ ನಾಯಕನಹಟ್ಟಿಯ ವಕೀಲ ಎಸ್.ಉಮಾಪತಿ 21 ಲಕ್ಷ ರೂ.ಗಳಿಗೆ ಪಡೆದು ಕೊಂಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಮುಕ್ತಿ ಭಾವುಟ ಹರಾಜಿನ ನಂತರ ನಾಯಕನಹಟ್ಟಿಯ ತೇರು ಬೀದಿಯಲ್ಲಿ ಶ್ರೀ ತಿಪ್ಪೇರುದ್ರಸ್ವಾಮಿಯ ಬೃಹತ್ ಗಾತ್ರದ ತೇರನ್ನು ಲಕ್ಷಾಂತರ ಭಕ್ತರು ಎಳೆದು ಪುನೀತರಾದರು.

ಈ ವೇಳೆ ಚಳ್ಳಕೆರೆ ಶಾಸಕ ಟಿ.ರಘುಮೂರ್ತಿ ಮತ್ತಿತರರಿದ್ದರು.

**ವರದಿ: ಕೋಡಿಹಳ್ಳಿ. ಶಿವಮೂರ್ತಿ.ಟಿ ಚಳ್ಳಕೆರೆ**

# ಗಾಂಧಿ ಗ್ರಾಮ ಪುರಸ್ಕಾರ ಪಡೆದ ಮುತ್ತಗಿಯಲ್ಲಿ ಸ್ವಚ್ಛತೆ ಮರೀಚಿಕೆ

**ಮುತ್ತಗಿ :** ರಸ್ತೆ ಮೇಲೆ ಹರಿಯುತ್ತಿರುವ ಚರಂಡಿ ನೀರು, ಅಲ್ಲಲ್ಲಿ ನಿಂತಿರುವ ತ್ಯಾಜ್ಯ ನೀರು, ಸ್ವಚ್ಛತೆ ಮರೀಚಿಕೆ ಬಸವನ ಬಾಗೇವಾಡಿ ತಾಲೂಕಿನ ಮುತ್ತಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಮುತ್ತಗಿ ಗ್ರಾಮದಲ್ಲಿ ಕಂಡು ಬರುವ ನೈಜ ಚಿತ್ರಣ ಇದಾಗಿದೆ.

ಆದರೂ ಗಾಂಧಿ ಗ್ರಾಮ ಪುರಸ್ಕಾರ ಪ್ರಶಸ್ತಿ ಪಡೆದಿದೆ ಇದಕ್ಕೆ ಅಪವಾದ ಎನ್ನುವಂತೆ ಗ್ರಾಮ ಪಂಚಾಯಿತಿ ಈ ಗ್ರಾಮದಲ್ಲಿ ವಾಸ್ತವಿಕವಾಗಿ ಈ ಸಾಧನೆ ಕಂಡು ಬರುವುದಿಲ್ಲ. ಕಡತದಲ್ಲಿಯೇ ಮಾತ್ರ ಅಭಿವೃದ್ಧಿ ಕಂಡು ಬರುತ್ತಿದೆ ಎನ್ನುತ್ತಾರೆ ಗ್ರಾಮಸ್ಥರು.

ಮುತ್ತಗಿ ಗ್ರಾ.ಪಂ. ಗೆ ಈ ಬಾರಿ "ಗಾಂಧಿ ಗ್ರಾಮ ಪುರಸ್ಕಾರ' ಲಭಿಸಿದ್ದರೂ ಸ್ವಚ್ಛತೆ ಮರೀಚಿಕೆಯಾಗಿದೆ.



ಅಂಗನವಾಡಿ ಕೇಂದ್ರವು ರಸ್ತೆ ಪಕ್ಕದಲ್ಲಿ,ರಸ್ತೆ ಹಾಳಾಗಿದ್ದು.ಸೂಕ್ತ ರಸ್ತೆ ಜೊತೆ ಚರಂಡಿ ವ್ಯವಸ್ಥೆ ಇಲ್ಲದ ಕಾರಣ ಚರಂಡಿಯಲ್ಲಿ ಹರಿಯ ಬೇಕಿದ್ದ ನೀರು ಅಂಗನವಾಡಿ ಕೇಂದ್ರದ ಪಕ್ಕದಲ್ಲೇ ರಸ್ತೆಯ ಮೇಲೆ ಶೇಖರಣೆಯಾಗಿದ್ದು, ಮಕ್ಕಳು ಅಂಗನವಾಡಿ ಕೇಂದ್ರಕ್ಕೆ ತೆರಳ ಬೇಕಾದರೆ ಗಲೀಜು ನೀರನ್ನು ತುಳಿದೆ ಅಂಗನವಾಡಿ ಕೇಂದ್ರಕ್ಕೆ ಪ್ರವೇಶಿಸ ಬೇಕು.ಅಷ್ಟೇ ಅಲ್ಲದೆ ದುರ್ವಾಸನೆ ನಡುವೆ ಮಕ್ಕಳು ಕಲಿಯುವಂತಾಗಿದೆ. ಮತ್ತು ಇದೆ ರಸ್ತೆ ಹಿಡಿದು ಗೊಲ್ಲರ ಓಣಿಗೆ ಹೋಗುತ್ತದೆ.

ಇಲ್ಲಿನ ಅಂಗನವಾಡಿ ಸಮೀಪದಲ್ಲಿ ಮನೆಗಳಿಂದ ಹೊರಡುವ ಕೊಳಚೆ ನೀರು ಸಂಗ್ರಹವಾಗುತ್ತಿದ್ದು, ಸೊಳ್ಳೆಗಳ ಉತ್ಪತಿಯ ತಾಣವಾಗಿ ಪರಿಣಮಿಸಿರುವ ಪರಿಣಾಮ ಪುಟ್ಟ ಮಕ್ಕಳಿಗೆ ರೋಗ– ರುಜಿನಗಳು ಹರಡುವ ಭೀತಿಯಿದೆ. ಹೀಗಾಗಿ ಸಂಬಂಧಪಟ್ಟ ಗ್ರಾ.ಪಂ. ಕೂಡಲೇ ಚರಂಡಿ ಹಾಗೂ ರಸ್ತೆ ಸೌಲಭ್ಯವನ್ನು ಕಲ್ಪಿಸಬೇಕು ಎಂದು ಅಲ್ಲಿನ ನಿವಾಸಿಗಳು ಆಗ್ರಹಿಸಿದ್ದಾರೆ.


ಅಂಗನವಾಡಿ ಸುತ್ತ ಇರುವ ಸುಮಾರು ಮನೆಗಳ ಕೊಳಚೆ ನೀರು ಸರಿಯಾಗಿ ಹರಿಯಲು ಚರಂಡಿಯ ವ್ಯವಸ್ಥೆ ಇಲ್ಲ. ರಸ್ತೆ ಕೂಡ ತೀರಾ ಹಾಳಾಗಿದ್ದು, ಪುಟ್ಟ ಮಕ್ಕಳು ಅಂಗನವಾಡಿಯತ್ತ ನಡೆದುಕೊಂಡು ಬರಲಾಗುತ್ತಿಲ್ಲ. ಗ್ರಾ.ಪಂ. ಆಡಳಿತ ಮಂಡಳಿ ನಿರ್ಲಕ್ಷ್ಯ ವಹಿಸಿದ್ದಾರೆ.ಎನ್ನುತ್ತಾರೆ ಗ್ರಾಮದ ಪ್ರಜ್ಞಾವಂತ ನಾಗರಿಕರು.

ರಸ್ತೆಯ ಮೇಲೆ ಕೊಳಚೆ ನೀರು ನಿಂತು ನಿತ್ಯವೂ ಗಬ್ಬು ವಾಸನೆ ಹರಡುತ್ತಿದೆ. ಸೊಳ್ಳೆಗಳ ಉತ್ಪತಿ ತಾಣವಾಗಿ ಮಾರ್ಪಟ್ಟಿದೆ. ಅಂಗನವಾಡಿ ಹತ್ತಿರ ಗಬ್ಬೆದ್ದು ನಾರುತ್ತಿರುವ ಗಟಾರ ನೀರು ಈ ರೀತಿ ಅವ್ಯವಸ್ಥೆವಿದ್ದರೂ ಈ ಗ್ರಾಮ ಪಂಚಾಯಿತಿಗೆ ಗಾಂಧಿ ಪುರಸ್ಕಾರ ನೀಡಿರುವುದು "ನಾಚಿಕೆಗೇಡಿನ" ಸಂಗತಿಯಾಗಿದೆ.

ಈಗಲಾದರೂ ಎಚ್ಚೆತ್ತು ಕೊಂಡು ಅಂಗನವಾಡಿ ಪಕ್ಕದಲ್ಲಿ ಹರಿಯುತ್ತಿರುವ ಕೊಳಕು ಗಲೀಜು ನೀರಿನಿಂದ ಮುಕ್ತಿ ನೀಡಿ ಮಕ್ಕಳಿಗೆ,ಗ್ರಾಮಸ್ಥರಿಗೆ ಅನುಕೂಲ ಮಾಡಿ ಕೊಡುತ್ತಾರೋ ಇಲ್ಲವೋ ಕಾಯ್ದು ನೋಡಬೇಕಾಗಿದೆ.

**ವರದಿ:ಮಹಾಂತೇಶ.ಹಾದಿಮನಿ. ವಿಜಯಪುರ**

# ‘ಮಹಾ’ ನೀರು ಬಿಡುಗಡೆಗೆ ಒತ್ತಾಯ



**ರಬಕವಿ–ಬನಹಟ್ಟಿ :** ಬೆಳಗಾವಿ, ವಿಜಯಪುರ ಹಾಗು ಬಾಗಲಕೋಟೆ ಜಿಲ್ಲೆಗಳ ಜನರಿಗೆ ಸಂಜೀವಿನಿಯಾಗಿರುವ ಕೃಷ್ಣೆಯ ಒಡಲು ಖಾಲಿಯಾಗುವ ಸ್ಥಿತಿಯಲ್ಲಿರುವ ಕಾರಣ ಕೃಷ್ಣಾ ನದಿ ತೀರದ ಜನ ಹಾಗು ಜಾನುವಾರುಗಳ ಹಿತದೃಷ್ಟಿಯಿಂದ ಮಹಾರಾಷ್ಟ್ರದ ಕೋಯ್ನಾ , ಕಾಳಮ್ಮವಾಡಿ ಜಲಾಶಯದಿಂದ ರಾಜ್ಯಕ್ಕೆ ಎರಡು ಟಿಎಂಸಿಯಷ್ಟು ನೀರನ್ನು ಶೀಘ್ರ ಬಿಡುಗಡೆಗೊಳಿಸಲು ರಾಜ್ಯ ಸರ್ಕಾರ ವಿಶೇಷ ಮುತುವರ್ಜಿ ವಹಿಸಬೇಕೆಂದು ರಬಕವಿ–ಬನಹಟ್ಟಿ ಹೋರಾಟ ಸಮಿತಿ ಸದಸ್ಯ ಚಂದ್ರಶೇಖರ ಭೂಯ್ಯಾರ ಒತ್ತಾಯಿಸಿದರು.

ಬಿಸಿಲಿನ ಪ್ರಭಾವ ಈಗಲೇ ಜಾಸ್ತಿಯಾಗಿದ್ದು , ಇನ್ನೂ ಎರಡೂವರೆ ತಿಂಗಳಷ್ಟು ಬೇಸಿಗೆ ಇರುವ ಸಂದರ್ಭ ನೀರಿನ ಅಭಾವ ದುಪ್ಪಟ್ಟಾಗಲಿದೆ. ಇನ್ನೊಂದು ವಾರದಲ್ಲಿ ನಲ್ಲಿ ಮೂಲಕ ಸರಬರಾಜಾಗುತ್ತಿದ್ದ ನದಿ ನೀರು ಸಂಪೂರ್ಣ ಸ್ಥಗಿತಗೊಳ್ಳಲಿದೆ. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಜಿಲ್ಲಾ ಉಸ್ತುವಾರಿ ಸಚಿವ ಆರ್. ಬಿ. ತಿಮ್ಮಾಪೂರ ಸಮ್ಮುಖದಲ್ಲಿ ಡಿಸಿಎಂ, ಜಲ ಸಂಪನ್ಮೂಲ ಸಚಿವ ಡಿ. ಕೆ. ಶಿವಕುಮಾರ ನೇತೃತ್ವದಲ್ಲಿ ಮಹಾರಾಷ್ಟ್ರ ಸರ್ಕಾರಕ್ಕೆ ಒತ್ತಾಯಿಸಿ ನೀರು ಬಿಡುಗಡೆಗೆ ಪ್ರಾಮಾಣಿಕ ಪ್ರಯತ್ನ ಮಾಡಬೇಕಿದೆ ಎಂದರು.

ಇದೇ ಸಂದರ್ಭ ಸಿದ್ದಪ್ಪ ಮೇಣಿ, ಡಾ. ರವಿ ಜಮಖಂಡಿ, ಪ್ರಶಾಂತ ಕೊಳಕಿ, ಸದಾಶಿವ ಗೋಂದಕರ, ಸೋಮು ಭೂಯ್ಯಾರ, ರವಿ ಗಡಾದ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಸೇತುವೆ ಸಂಚಾರ ಪ್ರಾರಂಭ:

## ಮಹಿಷವಾಡಗಿ ಬೋಟ್ ಸಂಪರ್ಕ ಸ್ಥಗಿತ



**ರಬಕವಿ–ಬನಹಟ್ಟಿ :** ಸಮೀಪದ ಜಾಕವೆಲ್ನಲ್ಲಿ ಅಥಣಿ ತಾಲೂಕಿನ ಸಂಪರ್ಕಕ್ಕೆ ಮಹಿಷವಾಡಗಿ ಸೇತುವೆ ನೀರಿನ ಪ್ರಮಾಣ ಕುಸಿತದ ಕಾರಣ ತೆರೆದುಕೊಂಡಿದ್ದು , ಬೈಕ್ ಸವಾರರು ಹಾಗು ಪಾದಚಾರಿಗಳು ಸೇತುವೆ ಮೇಲೆ ಸಂಚರಿಸುತ್ತಿದ್ದು , ಬೋಟ್ ಸೇವೆಯನ್ನು ಸ್ಥಗಿತಗೊಳಿಸಲಾಗಿದೆ.

ಹಲವಾರು ತಿಂಗಳಿಂದ ನೀರಲ್ಲಿ ಮುಳಗಿದ್ದ ಬ್ಯಾರೇಜ್ ಕಳೆದ ಸೋಮವಾರದಿಂದ ಕಾಣುತ್ತಿದೆ. ನೀರಿನ ಮಟ್ಟ ಕೆಲ ದಿನಗಳಲ್ಲಿ ದಿಢೀರನೇ ಭಾರೀ ಕುಸಿತ ಕಂಡ ಹಿನ್ನೆಲೆಯಲ್ಲಿ ಜನರಿಗೆ ಬೇಸಿಗೆಯ ಆತಂಕ ಶುರುವಾಗಿದೆ. ಇದೇ ರೀತಿ ಪ್ರತಿ ದಿನ ನೀರು ಖಾಲಿಯಾದರೆ ಎಪ್ರೀಲ್ ದ್ವಿತಿಯಾರ್ಧದಲ್ಲಿ ವಾರದಲ್ಲಿ ನೀರು ಖಾಲಿಯಾಗಬಹುದು ಎಂದು ಅಂದಾಜಿಸಲಾಗಿದೆ.

> **“ಬೇಸಿಗೆ ಕಾರಣ ಮುಂಜಾಗ್ರತಾ ಕ್ರಮವಾಗಿ ನಗರಸಭೆ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡಿದೆ. ಕಾರಣ ಸಾರ್ವಜನಿಕರು ನೀರನ್ನು ಮಿತವ್ಯಯವಾಗಿ ಬಳಕೆ ಮಾಡಬೇಕು. ಕೃಷ್ಣಾ ನದಿಯಲ್ಲಿ ನಿಂತ ನೀರಾಗಿರುವುದರಿಂದ ಸಾರ್ವಜನಿಕರು ಆರೋಗ್ಯದ ದೃಷ್ಠಿಯಿಂದ ನೀರನ್ನು ಕಾಯಿಸಿ ಸೋಸಿ ಆರಿಸಿ ನೀರನ್ನು ಕುಡಿಯಬೇಕು”.**
>
> ◆ **ಜಗದೀಶ ಈಟಿ**
> **ಪೌರಾಯುಕ್ತರು, ನಗರಸಭೆ ರಬಕವಿ–ಬನಹಟ್ಟಿ**

# ಜ್ಞಾನ ಸಂಪನ್ಮೂಲ ವ್ಯಕ್ತಿಯಾಗಿ ಶಿಕ್ಷಕನಾಗಬೇಕು



**ರಬಕವಿ–ಬನಹಟ್ಟಿ :** ಸಮಾಜದ, ದೇಶದ ದಿಕ್ಕು ಬದಲಿಸುವ ಶಕ್ತಿ ಶಿಕ್ಷಕನಿಗೆ ಮಾತ್ರವಿದೆ. ಜ್ಞಾನ ಸಂಪನ್ಮೂಲ ವ್ಯಕ್ತಿಯೊಂದಿಗೆ ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಂಡು ಆದರ್ಶ ವ್ಯಕ್ತಿಗಳಾಗಿ ಶಿಕ್ಷಕನಾಗ ಬಯಸ ಬೇಕೆಂದು ಹಿರಿಯ ಸಾಹಿತಿ ಸಿದ್ಧರಾಜ ಪೂಜಾರಿ ಹೇಳಿದರು.

ನಗರದ ಜನತಾ ಶಿಕ್ಷಣ ಸಂಘದ ಶಿಕ್ಷಣ ಮಹಾವಿದ್ಯಾಲಯದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು,

ಉತ್ತಮ ಶಿಕ್ಷಕರನ್ನು ಸಮಾಜಕ್ಕೆ ಒದಗಿಸುವುದೇ ಶಿಕ್ಷಣ ಮಹಾವಿದ್ಯಾಲಯದ ಧ್ಯೇಯ. ಅಧ್ಯಯನಶೀಲ ಪ್ರವೃತಿಯಿಂದ ನೆಲದ ಸತ್ವ , ಅಭಿರುಚಿ, ಸಂಸ್ಕೃತಿಗೆ ಪೂರಕವಾಗಿ ಶಿಕ್ಷಣ ನೀಡುವದೇ ಮುಖ್ಯ ಗುರಿಯಾಗಿದೆ ಎಂದು ಪೂಜಾರಿ ತಿಳಿಸಿದರು.

ಸಾನಿಧ್ಯ ವಹಿಸಿದ್ದ ಕೊಣ್ಣೂರಿನ ಹೊರಗಿನಮಠದ ವಿಶ್ವಪ್ರಭು ಶಿವಾಚಾರ್ಯರು ಮಾತನಾಡಿ, ಉತ್ತಮ ಸಮಾಜ ನಿರ್ಮಾಣಕ್ಕೆ ಶಿಕ್ಷಕರ ಪಾತ್ರ ಹಿರಿದು.

ಕೇವಲ ಸ್ವಾರ್ಥ ಅಥವಾ ಕಾಟಾಚಾರಕ್ಕೆ ಶಿಕ್ಷಣ ಪಡೆಯದೆ ಸಮಾಜಕ್ಕಾಗಿ ಏನನ್ನಾದರೂ ನೀಡಬೇಕೆಂಬ ಉದ್ದೇಶದಿಂದ ಶಿಕ್ಷಣ ಪಡೆಯಬೇಕೆಂದು ವಿದ್ಯಾರ್ಥಿಗಳಿಗೆ ತಿಳಿ ಹೇಳಿದರು.

ವೇದಿಕೆ ಮೇಲೆ ಶಿಕ್ಷಣ ವಿದ್ಯಾಲಯದ ಚೇರಮನ್ ಶಂಕರ ಜಾಲಿಗಿಡದ, ಓಂಪ್ರಕಾಶ ಕಾಬ್ರಾ ,

ಪ್ರಾಚಾರ್ಯೆ ಎಂ. ವಿ. ಬೂದಿ, ಎಲ್. ವಿ. ನಿಂಬರಗಿ

ಎಸ್. ಎಸ್. ನಡುವಿನಮನಿ, ಎಸ್. ಐ. ಮೇಲಗಿರಿ, ಎಂ. ಎಸ್. ಮಠಪತಿ, ಈರಣ್ಣ ಬಿಳ್ಳೂರ, ಎಸ್. ಎಸ್. ನೇಸೂರ, ಜಯಶ್ರೀ ಕೊಲ್ಹಾಪುರ ಹಾಜರಿದ್ದರು.

ಭಾಗ್ಯಶ್ರೀ ಬಿಳ್ಳೂರ ಸ್ವಾಗತಿಸಿದರು. ರಾಮಪ್ಪ ರಾವಳ ನಿರೂಪಿಸಿದರು.

ರುಕ್ಮಿಣಿ ಹರಿಜನ ವಂದಿಸಿದರು.

# ಮಹಿಷವಾಡಗಿ ಕಾಮಗಾರಿ ಸೇತುವೆ ಪುನರಾರಂಭ

## ಸಂತಸದಲ್ಲಿ ಜನತೆ । ಬಾಗಲಕೋಟೆ–ಬೆಳಗಾವಿ ಜಿಲ್ಲೆಗಳ ಸಂಪರ್ಕ ಸೇತುವೆ

**ರಬಕವಿ–ಬನಹಟ್ಟಿ :** ಬೆಳಗಾವಿ–ಬಾಗಲಕೋಟೆ ಜಿಲ್ಲೆ ಬೆಸುಗೆ ಮಾಡುವಲ್ಲಿ ಮಹತ್ತರ ಯೋಜನೆಯಾಗಿರುವ ರಬಕವಿ ಜಾಕವೆಲ್ನ ಸಮೀಪದ ಕೃಷ್ಣಾ ನದಿಗೆ ಅಡ್ಡಲಾಗಿ ನಿರ್ಮಿಸಲಾಗುತ್ತಿರುವ ಮಹಿಷವಾಡಗಿ ಸೇತುವೆ ಕಾಮಗಾರಿ ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಿನ ಪ್ರಮಾಣದಲ್ಲಿದ್ದರಿಂದ ತಾತ್ಕಾಲಿಕ ಸ್ಥಗಿತಗೊಂಡಿತ್ತು. ಆದರೆ ಇದೀಗ ನೀರು ಬಹಳಷ್ಟು ಇಳಿಮುಖವಾದ ಹಿನ್ನೆಲೆಯಲ್ಲಿ ಅದು ಪುನರಾರಂಭವಾಗಿದ್ದು , ರಬಕವಿ–ಬನಹಟ್ಟಿ ಜನತೆಯಲ್ಲಿ ಮಂದಹಾಸ ಮೂಡುವಂತಾಗಿದೆ.

2018 ರಲ್ಲಿ ಮಾಜಿ ಸಚಿವೆ ಉಮಾಶ್ರೀಯವರು 30 ಕೋಟಿ ರೂ.ಗಳಷ್ಟು ಟೆಂಡರ್ ಕಾಮಗಾರಿ ಮೂಲಕ ನಾಗಾರ್ಜುನ ಕನ್ಸ್ಟ್ರಕ್ಷನ್ ಕಂಪನಿಗೆ ನೀಡಿತ್ತು. ಕಳೆದ ಐದು ವರ್ಷಗಳಲ್ಲಿ ಕೇವಲ ಶೇ.25 ರಷ್ಟು ಮಾತ್ರ ಕಾಮಗಾರಿ ನಡೆದಿತ್ತು.

> **‘ಪುನರ್ ಕಾಮಗಾರಿ ಪ್ರಾರಂಭಗೊಂಡಿದ್ದು ಸ್ವಾಗತ. ಬೇಸಿಗೆ ದಿನಗಳಲ್ಲಿ ನದಿಗಳಲ್ಲಿನ ಸೇತುವೆಯ ಎಲ್ಲ ಕಾರ್ಯ ಮುಕ್ತಾಯಗೊಳ್ಳಬೇಕು. ಇದಕ್ಕೆ ನಾಗರಿಕರಿಂದ ಸಕಲ ರೀತಿಯ ಸಹಕಾರವಿದೆ.’**
>
> ❑ **ಡಾ. ರವಿ ಜಮಖಂಡಿ**
> **ಅಧ್ಯಕ್ಷ, ಹೋರಾಟ ಸಮಿತಿ, ರಬಕವಿ–ಬನಹಟ್ಟಿ.**

ಇದಕ್ಕೆ ಪೂರಕವಾಗಿ 2021 ರಲ್ಲಿ ಕಾಮಗಾರಿಗೆ ಮತ್ತಷ್ಟು ಉತ್ತೇಜನ ನೀಡುವ ಸಲುವಾಗಿ ಹಾಲಿ ಶಾಸಕ ಸಿದ್ದೂ ಸವದಿ ಈ ಟೆಂಡರ್ ಕಾಮಗಾರಿಯನ್ನು 50 ಕೋಟಿ ರೂ.ಗಳವರೆಗೆ ಹೆಚ್ಚಳಗೊಳಿಸುವ ಮೂಲಕ ಕಾಮಗಾರಿ ಇನ್ನಷ್ಟು ಉತ್ತಮ ಹಾಗು ವಿಸ್ತರಣೆಯಾಗಲೆಂದು ಸರ್ಕಾರದಿಂದ ಅನುಮೋದನೆ ಮಾಡಿಸಿದ್ದರು.



**ರಬಕವಿ-ಬನಹಟ್ಟಿ : ಬೆಳಗಾವಿ-ಬಾಗಲಕೋಟೆ ಜಿಲ್ಲೆಗೆ ಪ್ರಮುಖ ಸಂಪರ್ಕದ ಕೊಂಡಿಯಾಗಿರುವ ಮಹಿಷವಾಡಗಿ ಸೇತುವೆ ಕಾಮಗಾರಿ ಪುನಃ ಪ್ರಾರಂಭವಾಗಿರುವದು.**

ಸಹ ಗುತ್ತಿಗೆಯನ್ನು ಪಡೆದಿರುವ ತೇಜಸ್ ಕನ್ಸ್ಟ್ರಕ್ಷನ್ ಕಂಪನಿಯು ಕಾಮಗಾರಿ ಸ್ಥಗಿತಗೊಳಿಸುವ ಮೂಲಕ ಅಲ್ಲಿಂದ ಕಾಮಗಾರಿಗೆ ಸಂಬಂಧಿಸಿದ ಯಂತ್ರಗಳೆಲ್ಲವನ್ನೂ ಸ್ಥಳಾಂತರಗೊಳಿಸಿ ಕಾಲ್ಕಿತ್ತಿದ್ದರು. ಇದೀಗ ಮತ್ತೇ ಸೋಮವಾರದಿಂದ ಕಾಮಗಾರಿ ಪ್ರಾರಂಭಗೊಂಡಿದೆ.

> **‘ಸುಮಾರು ಎಂಟು ವರ್ಷಗಳಿಂದ ಆಮೆಯ ಗತಿಯಲ್ಲಿ ಈ ಕೆಲಸ ಸಾಗಿದೆ. ಶೀಘ್ರವೇ ಸೇತುವೆ ನಿರ್ಮಿಸಿ ಬೆಳಗಾವಿ–ಬಾಗಲಕೋಟೆ ಜಿಲ್ಲೆಯ ಗಡಿ ಜನತೆಗೆ ಅನುಕೂಲ ಕಲ್ಪಿಸಬೇಕು’.**
>
> ❑ **ಪ್ರವೀಣ ಹಜಾರೆ,**
> **ಉದ್ಯಮಿ, ರಬಕವಿ.**

ಪರಿಹಾರವಿಲ್ಲ: ಸೇತುವೆ ನಿರ್ಮಾಣಕ್ಕಾಗಿ ಸುಮಾರು ನಾಲ್ಕೈದು ಎಕರೆಯಷ್ಟು ಭೂಮಿಯನ್ನು ವಶಪಡಿಸಿಕೊಂಡಿರುವ ಸರ್ಕಾರದಿಂದ ರೈತರಿಗೆ ಇಲ್ಲಿಯವರೆಗೂ ಪರಿಹಾರ ನೀಡಿಲ್ಲ. ಈ ಕುರಿತು ಕೃಷಿ ಭೂ ಮಾಲಿಕರು ಸೇತುವೆ ನಿರ್ಮಾಣಕ್ಕಾಗಿ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಸರ್ಕಾರ ಅಥವಾ ಸಂಬಂಧಿಸಿದ ಇಲಾಖೆ ಸೂಕ್ತ ಕ್ರಮಗಳನ್ನು ಕೈಗೊಂಡು, ಶೀಘ್ರವೇ ಪರಿಹಾರ ಒದಗಿಸಬೇಕಿದೆ.

ಟೆಂಡರ್ ಕಾರ್ಯದಲ್ಲಿ ವೈಫಲ್ಯ: ಟೆಂಡರ್ ಸಮಯದಲ್ಲಿ ಸೇತುವೆ ನಿರ್ಮಾಣಕ್ಕಾಗಿ ಕೃಷ್ಣಾ ನದಿಯಲ್ಲಿನ ನೀರು ಇಲ್ಲದಂತೆ ನಿರ್ಮಿಸಿಕೊಂಡು ಸೇತುವೆಗಳ ಪಿಲ್ಲರ್ಗಳನ್ನು ಅಳವಡಿಸುವಂತೆ ಆಗಿದೆ. ಆದರೆ ಸಮೀಪವೇ ಹಿಪ್ಪರಗಿ ಜಲಾಶಯವಿರುವ ಕಾರಣ ವರ್ಷಪೂರ್ತಿ ನೀರು ನದಿಯಲ್ಲಿರುತ್ತದೆ. ನದಿಯಲ್ಲಿ ಸೇತುವೆ ನಿರ್ಮಾಣದ ವೆಚ್ಚದ ವ್ಯವಸ್ಥೆ ಬದಲಿಸಬೇಕಾಗಿದೆ ಎಂಬುದು ಗುತ್ತಿಗೆದಾರನ ಮಾತು.

## 17 ಸಾವಿರ ಪ್ರಕರಣ ಇತ್ಯರ್ಥ । ವಿಚ್ಛೇತನ ಹಿಂಪಡೆದ 7 ಜೋಡಿಗಳು

# ಲೋಕ ಅದಾಲತ್‌ನಲ್ಲಿ ಅಗಲಿದ ದಂಪತಿ ಪುನರ್ಮಿಲನ

**ಬಾಗಲಕೋಟೆ :** ಕಳೆದ 3 ವರ್ಷಗಳಿಂದ ಅಗಲಿದ ದಂಪತಿಗಳನ್ನು ಪರಸ್ಪರ ಮಾಲೆಯನ್ನು ಹಾಕಿಸುವ ಮೂಲಕ ಜಿಲ್ಲಾ ನ್ಯಾಯಾಲಯದಲ್ಲಿ ಮಾರ್ಚ 16 ರಂದು ನಡೆದ ಲೋಕ ಅದಾಲತ್‌ನಲ್ಲಿ ಒಂದು ಮಾಡಲಾಯಿತು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಎನ್.ವಿ.ವಿಜಯ ಅವರ ನೇತೃತ್ವದಲ್ಲಿ ನಡೆದ ಲೋಕ ಅದಾಲತ್‌ನಲ್ಲಿ ಜಮಖಂಡಿಯ ಕೊಣ್ಣೂರ ಗ್ರಾಮದ ಸೋಮಪ್ಪ ಮತ್ತು ಸುವರ್ಣ ದಂಪತಿಗಳು ಕಳೆದ 3 ವರ್ಷಗಳಿಂದ ಬೇರೆಯಾಗಿದ್ದರು. ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದ್ಯಾವಪ್ಪ ಎಸ್.ಬಿ ಅವರು ಬೆಳಗಿನ ಜಾವ ವಾಯು ವಿಹಾರಕ್ಕೆ ತೆರಳಿದ ಸಂದಭದಲ್ಲಿ ಜಿಲ್ಲಾ ನ್ಯಾಯಾಲಯ ಆವರಣದಲ್ಲಿ ಸುವರ್ಣ ಪರಲಂಕಿ ಅವರನ್ನು ಮಾತನಾಡಿಸಿದಾಗ ದಂಪತಿಗಳು ದೂರವಾಗಿರುವ ವಿಚಾರ ತಿಳಿದು ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡು ದಂಪತಿಗಳನ್ನು ಒಂದು ಮಾಡುವ ಮೂಲಕ ಮಾನವೀಯತೆ ಮೆರೆದಿದ್ದಾರೆ.

ಜಿಲ್ಲೆ ಹಾಗೂ ಅಧೀನ ನ್ಯಾಯಾಲಯದಲ್ಲಿ ವಿಚ್ಛೇದನ ಕೋರಿ ಕುಟುಂಬ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ ದಂಪತಿಗಳನ್ನು ಸಹ ರಾಜಿ ಸಂದಾನದ ಮೂಲಕ ಪುನರ್ಮಿಲನ ಮಾಡಲಾಯಿತು. ಜಮಖಂಡಿ ನ್ಯಾಯಾಲಯದಲ್ಲಿ 2, ರಬಕವಿ, ಬೀಳಗಿ, ಬಾದಾಮಿ, ಮುಧೋಳ, ಹುನಗುಂದ ನ್ಯಾಯಾಲಯದಲ್ಲಿ ತಲಾ ಒಂದು ಪ್ರಕರಣಗಳು ಸೇರಿ ಒಟ್ಟು 7 ಪ್ರಕರಣಗಳನ್ನು ಇತ್ಯರ್ಥಪಡಿಸಲಾಯಿತು.

ಜಿಲ್ಲೆ ನ್ಯಾಯಾಲಯ ಹಾಗೂ ಅಧೀನ ನ್ಯಾಯಾಲಯ ಸೇರಿ ಒಟ್ಟು 17 ಸಾವಿರ



ಪ್ರಕರಣಗಳನ್ನು ಇತ್ಯರ್ಥ ಪಡಿಸಲಾಗಿದೆ. ಇದರಲ್ಲಿ ನ್ಯಾಯಾಲಯದಲ್ಲಿ ಬಾಕಿ ಇರುವ 9187 ಪೈಕಿ 6935 ಮತ್ತು ವಾಜ್ಯ ಪೂರ್ವ ಪ್ರಕರಣಗಳಲ್ಲಿ 11693 ಪೈಕಿ 10065 ಪ್ರಕರಣಗಳನ್ನು ಇತ್ಯರ್ಥಪಡಿಸಲಾಯಿತು. ಜಿಲ್ಲಾ ನ್ಯಾಯಾಲಯದಲ್ಲಿ ಬಾಕಿ ಇರುವ 2563 ಪ್ರಕರಣಗಳ ಪೈಕಿ 1786, ಬೀಳಗಿ ನ್ಯಾಯಾಲಯದಲ್ಲಿ 480 ಪೈಕಿ 283, ಮುಧೋಳ ನ್ಯಾಯಾಲಯದಲ್ಲಿ 966 ಪೈಕಿ 763, ಬನಹಟ್ಟಿ ನ್ಯಾಯಾಲಯದಲ್ಲಿ 1281 ಪೈಕಿ 1043, ಹುನಗುಂದ ನ್ಯಾಯಾಲಯದಲ್ಲಿ 432 ಪೈಕಿ 286, ಇಲಕಲ್ಲ ನ್ಯಾಯಾಲಯದಲ್ಲಿ 504 ಪೈಕಿ 358 ಹಾಗೂ ಜಮಖಂಡಿ ನ್ಯಾಯಾಲಯದಲ್ಲಿ 1125 ಪೈಕಿ 827 ಪ್ರಕರಣಗಳನ್ನು ಇತ್ಯರ್ಥಪಡಿಸಲಾಯಿತು.

ಬ್ಯಾಂಕಿಗೆ ಸಂಬಂಧಿಸಿದಂತೆ 1577 ಪ್ರಕರಣಗಳ ಪೈಕಿ 199 ಇತ್ಯರ್ಥಪಡಿದ್ದು, ಇತ್ಯರ್ಥ ಮೊತ್ತ 3.03 ಕೋಟಿ ರೂ. ಎಂದು ಅಂದಾಲಿಸಲಾಗಿದೆ.

ವಿದ್ಯುತ್ ಕಾಯ್ದೆಗೆ ಸಂಬಂಧಿಸಿದ 280 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. ಪ್ರಕರಣದ ಮೊತ್ತ 3.19 ಲಕ್ಷ ಆಗಿರುತ್ತದೆ. ಕಂದಾಯ ಇಲಾಖೆಗೆ ಸಂಬಂಧಿಸಿದ 1147 ಪೈಕಿ 1097 ಇತ್ಯರ್ಥಪಡಿಸಲಾಗಿದೆ. ಸಂಚಾರಿ ಉಲ್ಲಂಘನೆಗೆ ಸಂಬಂಧಿಸಿದ 5738 ಪ್ರಕರಣಗಳನ್ನು ಇತ್ಯರ್ಥಗೊಂಡು 13.59 ಲಕ್ಷ ರೂ.ಗಳನ್ನು ಸೆಟಲ್‌ಮೆಂಟ್ ಮಾಡಲಾಯಿತು.

ಲೋಕ ಅದಾಲತ್ ಶಿಬಿರದಲ್ಲಿ ಪ್ರಧಾನ ಹಿರಿಯ ದಿವಾನಿ ನ್ಯಾಯಾಧೀಶೆ ಪಲ್ಲವಿ ಆರ್, 1ನೇ ಹೆಚ್ಚುವರಿ ಹಿರಿಯ ನ್ಯಾಯಾದೀಶೆ ಹೇಮಾ ಪಸ್ತಾಪೂರ, ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಎಸ್.ಬಿ.ರೆಹಮಾನ್, 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧಿಶ ಜಿ.ಎ.ಮೂಲಿಮನಿ, ಮುಖ್ಯ ಪ್ರಧಾನ ನ್ಯಾಯಾಧೀಶ ಕೃಷ್ಣಮೂರ್ತಿ ಪಡಸಲಗಿ, 2ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶ ಮಹೇಶ ಪಾಟೀಲ, ಪ್ರಧಾನ ದಿವಾಣಿ ನ್ಯಾಯಾಧೀಶ ಮುರಗೇಂದ್ರ ತುಬಾಕೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದ್ಯಾವಪ್ಪ ಎಸ್.ಬಿ ಇದ್ದರು.

## ಬಿಸಿಲಿನ ತಾಪಮಾನ ದಿನೇ ದಿನೆ ಹೆಚ್ಚಳ ಪ್ರತಿದಿನ 8 ಎಂಚಿನಷ್ಟು ನೀರು ಇಳಿಮುಖ

**ತೇರದಾಳ :** ಜಿಲ್ಲೆಯ ಜೀವನಾಡಿ ಎನಿಸಿಕೊಂಡಿರುವ ಕೃಷ್ಣಾ ನದಿಯಲ್ಲಿ ಪ್ರತಿದಿನ ಎಂಟು ಇಂಚಿನಷ್ಟು ನೀರು ಇಳಿಮುಖಗೊಳ್ಳುತ್ತಿದ್ದು, ನದಿ ಖಾಲಿ ಆಗುವ ಲಕ್ಷಣಗಳು ಗೋಚರಿಸುತ್ತಿವೆ. ಇತ್ತ ಬಿಸಿಲಿನ ತಾಪಮಾನ ದಿನೇ ದಿನೆ ಹೆಚ್ಚಾಗುತ್ತಿದ್ದು, ಸೂರ್ಯನ ಪ್ರಖರತೆಗೂ ನದಿಯ ನೀರಿನ ಮಟ್ಟ ಇಳಿಮುಖಗೊಳ್ಳಲು ಕಾರಣವಾಗಿದೆ. ಅಲ್ಲದೆ ಜನ ಕೂಡ ಶಕೆಗೆ ಬೆಚ್ಚಿ ಬೀಳುತ್ತಿದ್ದಾರೆ. ಮಾರ್ಚ್ ಹೇಗೂ ದಾಟಬಹುದು. ಆದರೆ ಏಪ್ರಿಲ್ ಮೇ ಹೇಗೆ ಎಂಬ ಸಲಾವ್ ಪುರಸಭೆಯವರಿಗೂ ಆಗಿದೆ. ಈಗಾಗಲೇ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲು ತಯಾರಿ ಒಂದಡೆ ಮಾಡಿಕೊಂಡಿದ್ದರೆ ಖಾಸಗಿ ಕೊಳವೆ ಬಾವಿಗಳ ಮಾಲೀಕರ ಜತೆಗೆ ನೀರು ಪಡೆಯುವ



ಮಾತುಕತೆ ಇನ್ನೊಂದಡೆ ನಡೆಯುತ್ತಿದೆ. ಮಹಾವೀರ ವೃತ್ತ ಬಳಿ ಪೈಪ್ ಒಡೆದ ಕಾರಣ ಪಟ್ಟಣದಲ್ಲಿ ನೀರು ಸರಬರಾಜು ಆಗಿಲ್ಲ. ಪೈಪ್ ದುರಸ್ತಿ ಆಗಿದ್ದು, ನೀರು ಪೂರೈಕೆ ಪ್ರಾರಂಭಗೊಂಡಿದೆ. ಬೇಸಿಗೆ ಇದ್ದ ಕಾರಣ ಸಾರ್ವಜನಿಕರು ವಿನಾಕರಾಣ ನೀರು ಪೋಲು ಮಾಡಬಾರದು. ಕೊಳವೆ ಬಾವಿಯ ನೀರನ್ನು ಕೂಡ ಮಿತವಾಗಿ ಬಳಸಬೇಕೆಂದು ಪುರಸಭೆ ನೀರು ಸರಬರಾಜು ವಿಭಾಗದ ಮುಖ್ಯಸ್ಥ ಪ್ರತಾಪ ಕೊಡುಗೆ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

## ನೆಮ್ಮದಿಯ ಬದುಕಿನ ಸೂತ್ರಕ್ಕೆ ಪಂಚ ಆರೋಗ್ಯ ಅಗತ್ಯ ಪ್ರೊ. ಎಮ್ ಕೃಷ್ಣೇಗೌಡ

**ಬಾಗಲಕೋಟ :** ನೆಮ್ಮದಿಯ ಬದುಕಿನ ಸೂತ್ರಕ್ಕೆ, ಆನಂದಕ್ಕೆ ಐದು ಆರೋಗ್ಯಗಳು ಮುಖ್ಯ ಎಂದು ಸಂಸ್ಕೃತಿಕ ಚಿಂತಕ, ವಾಗ್ಮಿ ಪ್ರೊ. ಎಮ್ ಕೃಷ್ಣೇಗೌಡರು ಪ್ರತಿಪಾದಿಸಿದರು.

ನಗರದ ಸಾಮಾಜಿಕ ಸೇವಾ ಸಂಸ್ಥೆ ಗೆಳೆಯರ ಬಳಗ ಹಾಗೂ ಚರಂತಿಮಠದ ಶಿವಾನುಭವ ಸಮೀತಿ ಸಹಯೋಗದೊಂದಿಗೆ ಆಯೋಜಿಸಿದ "ಬದುಕಿನ ಸೊಗಸು ಸೌಂದರ್ಯ" ಕುರಿತು ಅವರು ಮಾತನಾಡಿದರು. ಶಾರೀರಕ ಆರೋಗ್ಯ, ಮಾನಸಿಕ ಆರೋಗ್ಯ, ಭಾವನಾತ್ಮಕ ಆರೋಗ್ಯ, ಸಾಮಾಜಿಕ ಆರೋಗ್ಯ ಹಾಗೂ ಆಧ್ಯಾತ್ಮಿಕ ಆರೋಗ್ಯ ಬಹಳ ಮುಖ್ಯ. ನಮಗೆ ಬೇಕಾಗಿರುವದು ಈ ಐದು ಆರೋಗ್ಯಗಳು. ಇವುಗಳನ್ನು ಅರಿತರೆ ನಮ್ಮ ಬದುಕು ಸುಗಮ ಎಂದು ತಿಳಿಸಿದರು.

ಅಂಗಡಿಯಲ್ಲಿ ಬೆಡ್ ಕೊಳ್ಳಬಹುದೇ ಹೊರತು ನಿದ್ದೆ ಕೊಳ್ಳಲಾಗದು. ಹೀಗೆಯೇ ಸಂತೋಷ ನೆಮ್ಮದಿಯನ್ನು ಅಂಗಡಿಯಲ್ಲಿ ಕೊಳ್ಳಲಾಗುವದಿಲ್ಲ. ನೆಮ್ಮದಿಯ-ಖುಷಿಯ ಬದುಕನ್ನು, ವಸ್ತುಗಳನ್ನು ಕೊಳ್ಳುವದರಲ್ಲಿ ಸಿಗುವದಿಲ್ಲ. ಹಾಗೆಯೇ ನೆರೆ ಮನೆಯವರೊಂದಿಗೆ ಹೋಲಿಸಿಕೊಂಡು



ಬದುಕುವದರಲ್ಲೂ ಸಿಗಲಾರದು ಎಂದು ಅವರು ವಿವರಿಸಿದರು. ಮಕ್ಕಳಿಗೆ ಸಂಬಂಧಗಳ ಮಹತ್ವ ತಿಳಿಸುವದರ ಜೊತೆಗೆ ಅಚೀವ ಮಾಡಬೇಕೆಂದು ಒತ್ತಾಯಿಸದಿರಿ. ಜೊತೆಗೆ ಮಾನವೀಯ ಸಂಬಂಧಗಳನ್ನು ಗಟ್ಟಿಗೊಳಿಸಿ, ಸಣ್ಣ ಸಣ್ಣ ಸಂಗತಿಗಳಲ್ಲಿ ಖುಷಿ ಕಾಣಿರಿ ಎಂದು ಸಲಹೆ ನೀಡಿದರು.

ಆಕಾಶದಲ್ಲಿ ಹಕ್ಕಿಗಳ ಹಾರಾಟ ಕಂಡ ಕುವೆಂಪು ಅವರು "ದೇವರು ರುಜು ಮಾಡಿದನು" ರಸವಶನಾಗುತ ಕವಿ ಅದ ನೋಡಿದನು. ಎನ್ನುವದರಲ್ಲಿ ಖುಷಿ ಇದೆ. ಹಾಗೆಯೇ ರೇಷ್ಮೆ ಹುಳು ತನ್ನ ಸುತ್ತ ದಾರದಿಂದ ಸುತ್ತಿಕೊಳ್ಳುತ್ತಾ ಅಂತಿಮವಾಗಿ ತಾನೇ ಬಲಿಯಾಗುವ ಹಾಗೆ ನಾವು ಅತಿಯಾಸೆ, ಅಸೂಯೆ, ಅಸಮಾಧಾನಕ್ಕೆ ಒಳಗಾಗದೇ ಸರಳವಾದ, ಸುಂದರ ಬದುಕು ಕಟ್ಟಿಕೊಂಡರೆ ಆನಂದ ತನ್ನಿಂದ ತಾನೇ ಸಿಗುತ್ತದೆ ಎಂದು ಕಿವಿ ಮಾತು ಹೇಳಿದರು.

ಚರಂತಿಮಠದ ಶ್ರೀ ಮ.ನಿ.ಪ್ರ ಪೂಜ್ಯ ಪ್ರಭು ಮಹಾಸ್ವಾಮಿಗಳು ದಿವ್ಯ ಸಾನಿದ್ಯ ವಹಿಸಿದ್ದರು. ವೇದಿಕೆ ಮೇಲೆ ಚರಂತಿಮಠದ ಶಿವಾನುಭವ ಸಮೀತಿ ಅಧ್ಯಕ್ಷ ಪಂಡಿತ ಆರಬ್ಬಿಯವರು ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ಕುಮಾರಿ ಶ್ರೇಯಾ ಜೋರಾಪೂರ ಪ್ರಾರ್ಥಿಸಿದರು. ಗೆಳೆಯರ ಬಳಗದ ಅಧ್ಯಕ್ಷ ಮಹಾಬಳೇಶ್ವರ ಗುಡಗುಂ-ಟಿಯವರು ಪರಿಚಯಿಸಿ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಮಹೇಶ ದರಬಾರ ವಂದಿಸಿದ ಕಾರ್ಯಕ್ರಮವನ್ನು ಬಸವರಾಜ ಭಗವತಿ ನಿರೂಪಿಸಿದರು.

## ಶ್ರೀ ಅರಣ್ಯ ಸಿದ್ದೇಶ್ವರನ ಜಾತ್ರೆ ಸಂಪನ್ನ



**ಹಾರೂಗೇರಿ :** ಪಟ್ಟಣದ ಸಮೀಪದಲ್ಲಿರುವ ಯಲ್ಪಾರಟ್ಟಿಯ ಶ್ರೀ ಅರಣ್ಯ ಸಿದ್ದೇಶ್ವರರ ಜಾತ್ರಾಮಹೋತ್ಸವವು ಅತೀ ವಿಜೃಂಭಣೆಯಿಂದ ಸಂಪನ್ನಗೊಂಡಿತು.ದಿ. 14 ರಿಂದ ಪ್ರಾರಂಭವಾಗಿದ್ದ ಜಾತ್ರೆ ಸಕಲ ಕಾರ್ಯಕ್ರಮಗಳೊಂದಿಗೆ ಸಾಂಗವಾಗಿ ಜರುಗಿತು.ಜಾತ್ರೆಗೆ ಆಗಮಿಸುತ್ತಿರುವ ಭಕ್ತರ ಸಂಖ್ಯೆ ಈ ಬಾರಿ ಅಧಿಕವಾಗಿತ್ತು.ಪಲ್ಲಕ್ಕಿ ಉತ್ಸವ, ಪೂಜೆ, ಅಭಿಷೇಕ, ನೈವೇದ್ಯ ಹಾಗೂ ದೇವರಿಗೆ ನಿವಾಳಿಕೆ ಮಾಡುವುದರೊಂದಿಗೆ ಜಾತ್ರಾ ಮಹೋತ್ಸವಕ್ಕೆ ತೆರೆಬಿದ್ದಿದ್ದು ಅನೇಕ ರಾಜ್ಯಗಳ ಭಕ್ತಾಧಿಗಳು ಆಗಮಿಸಿ ದರ್ಶನ ಪಡೆದರು.ತಾಲೂಕಾ ಆಡಳಿತ ಹಾಗೂ ಪೊಲೀಸ್ ಇಲಾಖೆ ಸಿಬ್ಬಂದಿಗಳು ಜಾತ್ರೆಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ವಿಶೇಷ ಕಾಳಜಿವಹಿಸಿದ್ದಕ್ಕೆ ಅಲ್ಲಿನ ಪೂಜಾರಿಗಳಾದ ಚಾಮರಾಜ ಒಡೆಯರ ಅವರು ಧನ್ಯವಾದ ಸಲ್ಲಿಸಿದರು.

## ಪಿಂಚಣಿಗಾಗಿ ಪರದಾಟ: ವರ್ಷದಿಂದ ಸಿಗದ ಮಾಸಾಶನ: ದುಸ್ಥಿತಿಯಲ್ಲಿ ವೃದ್ಧರು, ವಿಧವೆಯರು

**ರಬಕವಿ-ಬನಹಟ್ಟಿ :** ತಾಲೂಕಿನ ಬಹುತೇಕ ವೃದ್ಧರು, ವಿಧವೆಯರಿಗೆ ತಿಂಗಳ ಕೊನೆಯಲ್ಲಿ ಕೈಗೆ ದೊರಕುತ್ತಿದ್ದ ಮಾಸಾಶನಕ್ಕೆ ಇದೀಗ ಜಾತಕ ಪಕ್ಷಿಯಂತೆ ಕಾಯುತ್ತ , ನಿತ್ಯ ತಹಶೀಲ್ದಾರ ಕಚೇರಿ, ಬ್ಯಾಂಕ್ ಹಾಗು ಅಂಚೆ ಕಚೇರಿಗೆ ಅಲೆದು ಸುಸ್ತಾಗಿ ಮನೆ ಹಿಡಿಯುತ್ತಿದ್ದಾರೆ.

ಸರ್ಕಾರದ ಎನ್ಪಿಸಿಐ ಲಿಂಕ್, ಆಧಾರ್ ಲಿಂಕ್, ಬೆರಳಚ್ಚು ಸೇರಿದಂತೆ ಅನೇಕ ಸಮಸ್ಯೆಗಳಿಂದ ಬಂದ್ ಆಗಿರುವ ಮಾಸಾಶನವು ಪುನರ್ ಪ್ರಾರಂಭವಾಗದೆ ಆಯಾ ಫಲಾನುಭವಿಗಳ ಖಾತೆಗೂ ಜಮೆಯಾಗದಿರುವುದ-ರಿಂದ ವೃದ್ಧರು ಹಾಗು ವಿಧವೆಯರಿಗೆ

> **'ಬಹಳಷ್ಟು ವೃದ್ಧರಿಗೆ, ವಿಧವೆಯರಿಗೆ ಕಳೆದೊಂದು ವರ್ಷದಿಂದ ಮಾಸಾಶನ ಸಿಗುತ್ತಿಲ್ಲ. ಈ ಕುರಿತು ಸಂಬಂಧಿಸಿದ ಅಧಿಕಾರಿಗಳಿಗೆ ಮನವರಿಕೆ ಮಾಡಿದರೂ ಪ್ರಯೋಜನವಾಗಿಲ್ಲ.'**
> **-ಸಂಜಯ ತೆಗ್ಗಿ, ಮಾಜಿ ನಗರಾಧ್ಯಕ್ಷ, ರಬಕವಿ-ಬನಹಟ್ಟಿ**

ದಿಕ್ಕೇ ತೋಚದಂತಾಗಿದ್ದು, ಕಳೆದೊಂದು ವರ್ಷದಿಂದ ಆರ್ಥಿಕ ಸಮಸ್ಯೆ ಎದುರಿಸುವಂತಾಗಿದೆ.

ಬಹಳಷ್ಟು ವೃದ್ಧರು ಜನಪ್ರತಿನಿಧಿ ಸೇರಿದಂತೆ ಸಂಬಂಧಿಸಿದ ಇಲಾಖೆ

> **'ಸಾಮಾಜಿಕ ಭದ್ರತಾ ಯೋಜನೆ ಪಿಂಚಣಿ ಸಿಗದ ಕುರಿತು ದೂರುಗಳಿವೆ. ಕೆಲ ಬ್ಯಾಂಕ್ ವಿಲೀನ ಹಾಗು ಇ-ಕೆವೈಸಿ ಕಾರಣದಿಂದ ಖಾತೆ ವಿಚಾರದಲ್ಲಿ ಗೊಂದಲ ನಿರ್ಮಾಣವಾಗಿದೆ. ಹಂತ-ಹಂತವಾಗಿ ಸಮಸ್ಯೆ ಪರಿಹರಿಸಲಾಗುತ್ತಿದೆ. ವಂಚಿತಗೊಂಡ ಫಲಾನುಭವಿಗಳು ತಹಶೀಲ್ದಾರ ಕಚೇರಿಗೆ ಸಂಪರ್ಕಿಸಿ'.**
> **-ಗಿರೀಶ ಸ್ವಾದಿ, ತಹಶೀಲ್ದಾರ, ರಬಕವಿ-ಬನಹಟ್ಟಿ**

ಅಧಿಕಾರಿಗಳ ಬಳಿ ಅಳಲು ತೋಡಿಕೊಂಡರೂ ಮಾಸಾಶನ ದೊರೆತಿಲ್ಲ. ಅನಾರೋಗ್ಯ, ಕೌಟುಂಬಿಕ ಸಮಸ್ಯೆಯಲ್ಲಿರುವ ವೃದ್ಧರ ಜೀವನದ ದುಸ್ಥಿತಿ ಹೇಳತೀರದಾಗಿದೆ. ಈ ಮಧ್ಯೆ ವಿಧವೆಯರಿಗೂ ಇದೇ ಸಮಸ್ಯೆ ಎದುರಾಗಿದೆ.

ಸಾಮಾಜಿಕ ಭದ್ರತೆ ಹೆಸರಲ್ಲಿ ಶುರುವಾದ ಸಂಧ್ಯಾ ಸುರಕ್ಷಾ, ವೃದ್ಧಾಪ್ಯ ವೇತನ, ಮೈತ್ರಿ, ಮನಸ್ವಿನಿ, ವಿಧವಾ ವೇತನ ಯೋಜನೆಗಳು ಸರ್ಕಾರದ ನಿರ್ಲಕ್ಷ್ಯದಿಂದ ಅಭದ್ರತೆಯಲ್ಲಿ ನರಳುತ್ತಿವೆ. ಮಾಸಾಶನ ಸಿಗದ ಫಲಾನುಭವಿಗಳ ಸಂಕಷ್ಟವನ್ನು ಜನಪ್ರತಿನಿಧಿಗಳು, ಅಧಿಕಾರಿಗಳು ಗಂಭೀರವಾಗಿ ಪರಿಗಣಿಸದಿರುವುದು ವಿಪರ್ಯಾಸದ ಸಂಗತಿ.

## ಹೆರಿಗೆ ಬಳಿಕ ಸರ್ಕಾರಿ ಜಿಲ್ಲಾ ಆಸ್ಪತ್ರೆಯಲ್ಲಿ ಬಾಣಂತಿ ಸಾವು, ನಾಲ್ವರು ಸಿಬ್ಬಂದಿ ಸಸ್ಪೆಂಡ್

**ವರದಿ:ಲಾಲಸಾಬ ಸವಾರಗೋಳ.**

**ವಿಜಯಪುರ :** ಹೆರಿಗೆ ಬಳಿಕ ಬಾಣಂತಿಗೆ ಕಾಣಿಸಿಕೊಂಡ ರಕ್ತದ ಸಮಸ್ಯೆಯಿಂದ ಆಕೆ ಮೃತಪಟ್ಟಿದ್ದು , ಕರ್ತವ್ಯ ನಿರ್ಲಕ್ಷ್ಯದ ಆರೋಪದಲ್ಲಿ ಸರ್ಕಾರಿ ಜಿಲ್ಲಾ ಆಸ್ಪತ್ರೆಯ ನಾಲ್ವರು ಸಿಬ್ಬಂದಿಯನ್ನು ಅಮಾನತು ಮಾಡಿರುವ ಘಟನೆ ಜರುಗಿದೆ. ಬಬಲೇಶ್ವರ ತಾಲೂಕಿನ ದಾದಮಟ್ಟಿ ಗ್ರಾಮದ ಶಾರದಾ ದೊಡಮನಿ ಮೃತ ಮಹಿಳೆ.

ಗರ್ಭಿಣಿಯಾಗಿದ್ದ ಶಾರದಾ ಹೆರಿಗೆಗಾಗಿ ವಿಜಯಪುರ ಸರ್ಕಾರಿ ಜಿಲ್ಲಾ ಆಸ್ಪತ್ರೆಗೆ ದಾಖಲಾಗಿದ್ದಳು. ಗಂಡು-ಹೆಣ್ಣು ಅವಳಿ ಮಕ್ಕಳಿಗೆ ಜನ್ಮ ನೀಡಿದ್ದಳು.

ಆದರೆ ಹೆರಿಗೆ ಬಳಿಕ ಬಾಣಂತಿ ಶಾರದಾ ಅವರಿಗೆ ತೀವ್ರ ರಕ್ತಸ್ರಾವ ಸಮಸ್ಯೆ ಎದುರಾಗಿ-ತ್ತು. ಇದರಿಂದ ಅಸ್ವಸ್ಥಳಾದ ಶಾರದಾಳಿಗೆ ರಕ್ತದ ಕೊರತೆ ಆಗಿದ್ದರಿಂದ ಆಕೆಗೆ ರಕ್ತ ನೀಡುವಲ್ಲಿ ಆಸ್ಪತ್ರೆಯ ಸಿಬ್ಬಂದಿ ಯಡವಟ್ಟು ಮಾಡಿಕೊಂಡಿದ್ದಾರೆ.

ಬಾಣಂತಿ ಶಾರದಾಗೆ ಎ ಪಾಸಿಟಿವ್ ರಕ್ತದ ಬದಲಾಗಿ ಬಿ ಪಾಸಿಟಿವ್ ರಕ್ತ ನೀಡಿದ್ದೇ ಸಮಸ್ಯೆಗೆ ಕಾರಣ ಎಂದು ದೂರಲಾಗಿದೆ.

ಕೂಡಲೇ ಸರ್ಕಾರಿ ಆಸ್ಪತ್ರೆಯಲ್ಲಿ ಸಾವು ಬದುಕಿನೊಂದಿಗೆ ಹೋರಾಡುತ್ತಿದ್ದ ಶಾರದಾಳನ್ನು ಅತ್ಯಾಧುನಿಕ ಸೌಲಭ್ಯ ಇರುವ ಬಿ.ಎಲ್.ಡಿ.ಇ. ಆಸ್ಪತ್ರೆಗೆ ದಾಖಲಿಸಲಾಗಿತ್ತು. ಫೆಬ್ರುವರಿ 23 ರಿಂದಲೇ ಬಿ.ಎಲ್.ಡಿ.ಇ. ಆಸ್ಪತ್ರೆಯ ವೈದ್ಯರ ಸತತ 26 ದಿನಗಳ ಪ್ರಯತ್ನದ ಬಳಿಕವೂ ಚಿಕಿತ್ಸೆ ಫಲಿಸದೇ ಶಾರದಾ ಮೃತಪಟ್ಟಿದ್ದಾಳೆ.

ಮೃತಳ ಅನಾಥ ಅವಳಿ ಶಿಶುಗಳನ್ನು ಬಿ.ಎಲ್.ಡಿ.ಇ.ಯಲ್ಲಿ ಆರೈಕೆ ಮಾಡಲಾಗುತ್ತಿದೆ.

ಸರ್ಕಾರಿ ಆಸ್ಪತ್ರೆ ವೈದ್ಯರ, ಸಿಬ್ಬಂದಿಯ ನಿರ್ಲಕ್ಷವೇ ಶಾರದಾಳ ಸಾವಿಗೆ ಕಾರಣ ಎಂದು ಕುಟುಂಬದ ಸದಸ್ಯರು ದೂರಿದ್ದಾರೆ. ಸದರಿ ಪ್ರಕರಣದಲ್ಲಿ ಲ್ಯಾಬ್ ಟೆಕ್ನೀಶಿಯನ್ ಈರಪ್ಪ ಜಂಬಗಿ, ಸ್ಟಾಫ ನರ್ಸ್ ಸುರೇಖಾ, ಲಕ್ಷ್ಮೀ, ಸವಿತಾ ಎಂಬವರನ್ನು ಸೇವೆಯಿಂದ ಅಮಾನತು ಮಾಡಿ ಸರ್ಕಾರಿ ಜಿಲ್ಲಾ ಆಸ್ಪತ್ರೆಯ ಸರ್ಜನ್ ಡಾ. ಶಿವಾನಂದ ಮಾಸ್ತಿಹೊಳಿ ಆದೇಶ ಹೊರಡಿಸಿದ್ದಾರೆ.

ಬಾಣಂತಿ ಶಾರದಾ ಸಾವಿಗೆ ಸರ್ಕಾರಿ ಆಸ್ಪತ್ರೆ ಸಿಬ್ಬಂದಿ ಆಕೆಯ ರಕ್ತದ ಗುಂಪಿನ ಬದಲಾಗಿ ಬೇರೆ ಗುಂಪಿನ ರಕ್ತ ಹಾಕಿರುವುದೇ ಕಾರಣವಾಗಿದೆ. ಪ್ರಕರಣದ ತನಿಖೆ ನಡೆಸಬೇಕು. ಮೃತಳ ಕುಟುಂಬಸ್ಥ-ರಿಗೆ ಪರಿಹಾರ ನೀಡಬೇಕು ಎಂದು ಕುಟುಂಬದ ಸದಸ್ಯರು ಹಾಗೂ ಗ್ರಾಮಸ್ಥರು ಆಗ್ರಹಿಸಿದ್ದಾರೆ. ಇಡೀ ಪ್ರಕರಣದ ತನಿಖೆಯ ಬಳಿಕ ಶಾರದಾಳ ಸಾವಿಗೆ ನಿಖರ ಕಾರಣ ತಿಳಿಯಲಿದೆ.

## ಹಾರೂಗೇರಿಯಲ್ಲಿ ಜರುಗುತ್ತಿದೆ ಬೃಹತ್ ಸಿದ್ಧಚಕ್ರ ಮಹಾಮಂಡಲ ಆರಾಧನೆ



**ಹಾರೂಗೇರಿ :** ಸ್ಥಳೀಯ 1008 ಆದಿನಾಥ ದಿಗಂಬರ ಜೈನ ಸಮುದಾಯ ಭವನದಲ್ಲಿ ಮೊದಲ ಬಾರಿಗೆ ಬೃಹತ್ ಸಿದ್ಧಚಕ್ರ ಮಹಾಮಂಡಲ ಆರಾಧನಾ ಮಹೋತ್ಸವ ಅತ್ಯಂತ ವಿಜೃಂಭಣೆಯಿಂದ ಜರುಗುತ್ತಿದೆ.

ಪಾವನ ಸಾನಿಧ್ಯವನ್ನು ಪ. ಪೂ. ಬಾಲಾಚಾರ್ಯ ಧರ್ಮಪ್ರಭಾವಕ ಶ್ರೀ 108 ಸಿದ್ಧಸೇನ ಮುನಿ ಮಹಾರಾಜರು ಹಾಗೂ ಪೂಜ್ಯ ಶ್ರೀ 108 ಸಮುದ್ರಸೇನ ಮಹಾರಾಜರು ಇವರ ಸಾನಿಧ್ಯದಲ್ಲಿ ಮತ್ತು ಪೂಜ್ಯ ಶ್ರೀ ಸ್ವಸ್ತಿಶ್ರೀ ಜಿನಸೇನ ಭಟ್ಟಾರಕ ಪಟ್ಟಾಚಾರ್ಯ ಮಹಾಸ್ವಾಮೀಜಿಗಳು, ನಾಂದನಿಮಠ ಇವರ ನೇತೃತ್ವದಲ್ಲಿ ದಿನಾಂಕ : 17-03-2024 ರಿಂದ 25-03-2024 ರ ವರೆಗೆ ಭರತೇಶ ವೈಭವದ ಕಾವ್ಯ ವಾಚನ ಹಾಗೂ ಪೂಜ್ಯ ಶ್ರೀ 108 ಬ್ರಹ್ಮಾನಂದಸಾಗರ ಮುನಿ ಮಹಾರಾಜರ ದೀಕ್ಷಾ ಮಹೋತ್ಸವ, ಮೆರವಣಿಗೆ, ಧರ್ಮೋಪದೇಶ, ಸಂಘ ಪೂಜೆ, ಸತ್ಕಾರ ಕಾರ್ಯಕ್ರಮಗಳಲ್ಲದೆ ಅನೇಕ ಆಧ್ಯಾತ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿದ್ದು, ಸಮಸ್ತ ಶ್ರಾವಕ ಶ್ರಾವಕಿಯರು ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಪಟ್ಟಣದ ಆದಿನಾಥ ದಿಗಂಬರ ಜೈನ ಮಂಡಳಿಯು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದ್ದಾರೆ.

**ವರದಿ : ಸುನೀಲ್ ಕಬ್ಬೂರ**

## ಆರೋಗ್ಯವಂತ ಮಹಿಳೆಯಿಂದ ಉತ್ತಮ ಸಮಾಜ ನಿರ್ಮಾಣ: ಡಾ. ಹುರಕಡ್ಲಿ

**ಬಾಗಲಕೋಟೆ :** ಭಾರತೀಯ ಅಹಾರ ಪದ್ದತಿಯಿಂದ ದೇಹದ ಆರೋಗ್ಯ ಸಮತೋಲದನಲ್ಲಿದೆ,ಅದೆ ರೀತಿ ಆರೋಗ್ಯವಂತ ಮಹಿಳೆಯಿಂದ ಉತ್ತಮ ಸಮಾಜ ನಿರ್ಮಾಣ ಸಾದ್ಯವೆಂದು ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದ ಮತ್ತು ಎಚ್ ಎಸ್,ಕೆ ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗದ ಸಹ ಪ್ರಾಧ್ಯಾಪಕಿ ಡಾ.ಕೀರ್ತಿ ಹುರಕಡ್ಲಿ ಹೇಳಿದರು.

ಅವರು ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯ ಹಾಗೂ ಅಕ್ಕಮಹಾದೇವಿ ಮಹಿಳಾ ಕಲಾ.ವಿಜ್ಞಾನ. ವಾಣಿಜ್ಯ ಮಹಾವಿದ್ಯಾಲಯದ ಮಹಿಳಾ ಸಬಲೀಕರಣ ಘಟಕದಿಂದ ಬುಧವಾರ ವಿಜ್ಞಾನ ಮಹಾವಿದ್ಯಾಲಯದ ಸಭಾಭವನದಲ್ಲಿ ನಡೆದ ವಿಶ್ವ ಮಹಿಳಾ ದಿನಾಚರಣೆಯ ಕಾರ್ಯಕ್ರಮದಲ್ಲಿ



ಮಹಿಳೆಯ ಆರೋಗ್ಯ ಮತ್ತು ಸಶಕ್ತತೆಯಲ್ಲಿನ ಹೊಸ ಬದಲಾವಣೆಯ ಕುರಿತು ಮಾತನಾಡಿದರು,

ಮಹಿಳೆಯರು ಮಾನಸಿಕ ಹಾಗೂ ಶರಿರ ಸದೃಡವಾಗಿದ್ದರೆ ಮಾತ್ರ ನಾವೂ ಅಂ-ದಕೊಂಡಿದ್ದನ್ನು ಸಾಧಿಸಲೂ ಸಾದ್ಯ, ದಿನನಿತ್ಯ ದ್ಯಾನ ಯೋಗ ನಡಿಗೆಯನ್ನು ಜೀವನದಲ್ಲಿ ಅಳವಡಿಸಿಕೊಳ್ಳ ಬೇಕು, ಭಾರತೀಯ ಅಹಾರ ಪದ್ದತಿಯು ದೇಹದ ಆರೋಗ್ಯವನ್ನು ಸಮತೋಲನವನ್ನು ಕಾಪಾಡುವಲ್ಲಿ ಸಹಕಾರಿಯಾಗಿದೆ, ಮನೆ ಅಡುಗೆ ಕುಟುಂಬದ ಆರೋಗ್ಯವನ್ನು ಕಾಪಾಡುತ್ತದೆ ಎಂದರು.

ಅಕ್ಕಮಹಾದೇವಿ ಮಹಿಳಾ ಮಹಾವಿದ್ಯಾಲಯದ ಪ್ರಾಚಾರ್ಯ ಎಸ್.ಜೆ.ಒಡೆಯರ ಮಾತನಾಡಿ ಮಹಿಳೆ ಇಂದು ಎಲ್ಲ ರಂಗದಲ್ಲೂ ಸಾಧನೆಯನ್ನು ಮಾಡುತ್ತಿದ್ದಾಳೆ, ಸಮುದಾಯದ ಪ್ರೋತ್ಸಾಹ ಬಲದಿಂದ ಮಹಿಳೆ ಏನೆಲ್ಲಾ ಸಾಧಿಸಲೂ ಸಿದ್ದವಾಗಿದ್ದಾಳೆ,ಅವಳ ಶಕ್ತಿ ಅಗಾದವಾಗಿದ್ದು ಮನೆಯಲ್ಲಿರುವ ತಾಯಿ,ಅಮ್ಮಂದಿರೆ ವಿದ್ಯಾರ್ಥಿನಿಯರಿಗೆ ಪ್ರೇರಣಾ ಶಕ್ತಿ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದವಿಜ್ಞಾನಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಎಸ್.ಎಮ್.ಗಾಂವಕರ ವಿವಿಧ ಕ್ಷೇತ್ರಗಳ್ಲಿ ಮಹಿಳೆಯರ ಸಾಧನೆಗೆ ಅವರ ಸತತ ಪ್ರಯತ್ನವೇ ಕಾರಣವಾಗಿದೆ, ಮಹಿಳೆ ಈಗ ಸಭಲೆಯಾಗಿದ್ದಾಳೆ ಎಂದರು.

ಕಾರ್ಯಕ್ರಮದಲ್ಲಿ ಐಕ್ಯೂಎಸಿ ಸಂಯೋಜಕಿ ಪಿ.ಕೆ.ಚೌಗಲಾ,ಮಹಿಳಾಸಶಕ್ತೀರಣಘಟಕದ ಸಂಯೋಜಕಿ ವಿ.ಎಸ್.ತಾಳಿಕೋಟಿ,ಡಾ. ಎಸ್.ಆರ.ಕಲಾದಗಿ ಉಪಸ್ಥಿತರಿದ್ದರು, ಕುಮಾರಿ ಮೇಘಾ ಪಾಗಿ ಕಾರ್ಯಕ್ರಮ ನಿರೂಪಿಸಿದರು, ಮಹಾವಿದ್ಯಾಲಯದ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

# ಹಿರಿಯರನ್ನು ಗೌರವಿಸುವ ಸಂಸ್ಕೃತಿ: ವಿಶ್ವ ಮಹಿಳಾ ದಿನಾಚರಣೆ



**ಬಾಗಲಕೋಟೆ :** ಹೆಣ್ಣಿನಲ್ಲಿರುವ ಸಾಮರ್ಥ್ಯ ಅಗಾಧವಾದದ್ದು. ಅವಳು ಒಬ್ಬ ತಾಯಿ, ಅಕ್ಕ, ತಂಗಿ, ಅತ್ತೆ, ಸೊಸೆ ಎಲ್ಲ ಪಾತ್ರಗಳನ್ನು ಸಮರ್ಥ–ರ್ವಾಗಿ ನಿಭಾಯಿಸಬಲ್ಲಳು. ಆಧುನಿಕ ಕಾಲದ ಈ ವಿಶ್ವ ಮಹಿಳಾ ದಿನಾಚರಣೆಯ ಹೊಳಹುಗಳು ನಮ್ಮ ಕನ್ನಡ ನಾಡಿನಲ್ಲಿ 12 ನೇ ಶತಮಾನದ ಶರಣೆಯರಲ್ಲಿ ಕಂಡು ಬಂದಿವೆ ಎಂದು ಶ್ರೀಮತಿ ರಾಜೇಶ್ವರಿ ಕುಪ್ಪಸ್ತ ಅವರು ಅಭಿಪ್ರಾಯ ಪಟ್ಟರು.

ಬಾಗಲಕೋಟೆಯ ವಿದ್ಯಾಗಿರಿ 12 ನೇ ಮುಖ್ಯರಸ್ತೆಯ ಮಹಿಳಾ ಬಳಗದವರು ಇದೇ ಮಾರ್ಚ್ 17 ರಂದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಿದರು. ಮುಂದುರೆದು ಇಂದಿನ ಮಹಿಳೆಯರು ಸದಾ ಕ್ರಿಯಾಶೀಲರಾಗಿ ಯಾವುದಾದರೂ ಕೆಲಸ ಕಾರ್ಯದಲ್ಲಿ ತೊಡಗಿಕೊಂಡಿರಬೇಕು ಎಂದು ಸಲಹೆ ನೀಡಿದರು.

ಇನ್ನೋರ್ವ ಅತಿಥಿ ಡಾ. ಉಮಾ ಅಕ್ಕಿ ಅವರು ಅಂದಿನಿಂದ ಇಲ್ಲಿಯತನಕ ಮಹಿಳಾ ಸ್ಥಾನಮಾನಗಳನ್ನು ಅವಲೋಕಿಸಿದಾಗ ಸಾಕಷ್ಟು ಬದಲಾವಣೆಗಳು ಕಂಡು ಬಂದಿವೆ. ಇಂದು ಮಹಿಳೆ ಎಲ್ಲ ಕ್ಷೇತ್ರಗಳಲ್ಲಿಯೂ ಸಾಧನೆ ಗೈದಿದ್ದಾಳೆ. ಆದರೆ ಅದಕ್ಕೆ ತಕ್ಕಂತೆ ನಮ್ಮ ದೇಶದ ಸಂಸ್ಕೃತಿಯನ್ನು ಮಕ್ಕಳಲ್ಲಿ ಬಿತ್ತುವಲ್ಲಿ ಮಹಿಳೆ ಶ್ರಮಿಸಿದರೆ ಮಹಿಳಾ ದಿನಾಚರಣೆಗೆ ಮಹತ್ವ ಬರುತ್ತದೆ. ಇದರಿಂದ ಹೊಂದಾಣಿಕೆ, ತಾಳ್ಮೆ, ಸರಿಯಾದ ತಿಳುವಳಿಕೆ ಇಂದಿನ ಹೆಣ್ಣುಮಕ್ಕಳಲ್ಲಿ ಅವಶ್ಯವಿದೆ ಎಂದು ಅಭಿಪ್ರಾಯ ಪಟ್ಟರು.

ಅಧ್ಯಕ್ಷೀಯ ಭಾಷಣ ಮಾಡಿದ ಶ್ರೀಮತಿ ಗದ್ದಿ ಅವರು ಇಂತಹ ಮಹಿಳಾ ವೇದಿಕೆಗಳು ಹೆಣ್ಣುಮಕ್ಕಳನ್ನು ಗೌರವಿಸುವಂತಹ ಕಾರ್ಯಕ್ರಮಗಳನ್ನು ನಡೆಸಿದರೆ ಮುಂದಿನವರಿಗೆ ಮಾದರಿಯಾಗಿರುತ್ತದೆ ಎಂದು ಅಭಿಪ್ರಾಯ ಪಟ್ಟರು. ವೇದಿಕೆಯಲ್ಲಿ ಪ್ರಗತಿ ಮಹಿಳಾ ಮಂಡಲದ ಅಧ್ಯಕ್ಷೆ ಶ್ರೀಮತಿ ವಿದ್ಯಾ ಹೆಬ್ಬಾಳ ಮತ್ತು ಕಾರ್ಯಕ್ರಮದಲ್ಲಿ ಸೀಮಾ ಮಣ್ಣೂರ, ಶೋಭಾ, ಸುಚಿತ್ರಾ, ವಿಜಯಲಕ್ಷ್ಮೀ, ಪ್ರೀತಿ ಮತ್ತೀತರರು ಭಾಗವಹಿಸಿದ್ದರು.

ಪ್ರಸ್ತುತ ಮಹಿಳಾ ದಿನಾಚರಣೆಯನ್ನು ವಿದ್ಯಾಗಿರಿ 12 ನೇ ಮುಖ್ಯರಸ್ತೆಯ ಸಂಸ್ಥಾಪಕ ಮಹಿಳಾ ಸದಸ್ಯರನ್ನು ಸನ್ಮಾನಿಸಲಾಯಿತು. ಅವರಲ್ಲಿ ಹಿರಿಯರಾದ ಉಮಾ ಕಡಕೋಳಮಠ, ನಾಯ್ಕರ್, ಗದ್ದಿ, ಜಿಗಜಿನ್ನಿ, ಜಿಡಗಿ, ಸಾಲಿಮಠ ಮತ್ತು ವಿರಕ್ತಮಠ ಅವರು ಪ್ರಮುಖರಾಗಿದ್ದಾರೆ.

ಕಾರ್ಯಕ್ರಮದಲ್ಲಿ ಶ್ರೀಮತಿ ವನಿತಾ ಗುಡ್ಡದ ಸ್ವಾಗತಿಸಿ ಪರಿಚಯಿಸಿದರು. ನಮ್ರತಾ ಚೌಡಿ ಪ್ರಾರ್ಥಿಸಿದರು. ಅನಿತಾ ಬುಳ್ಳಾ ನಿರೂಪಿಸಿದರು.

# ಮನೆ ಮನೆ ಮತದಾನಕ್ಕೆ ಅವಕಾಶ

**ಬಾಗಲಕೋಟೆ :** ಭಾರತ ಚುನಾವಣಾ ಆಯೋಗವು ಈ ಬಾರಿ ಮನೆ ಮನೆ ಮತದಾನಕ್ಕೆ ಅವಕಾಶ ಕಲ್ಪಿಸಿದ್ದು, ಅದಕ್ಕಾಗಿ ನಮೂನೆ 12 ಭರ್ತಿ ಮಾಡಿಕೊಡುವುದು ಅವಶ್ಯಯವಾಗಿದೆ ಎಂದು ಜಿಲ್ಲಾಧಿಕಾರಿ ಆಗಿರುವ ಜಿಲ್ಲಾ ಚುನಾವಣಾಧಿಕಾರಿ ಜಾನಕಿ ಕೆ.ಎಂ ತಿಳಿಸಿದ್ದಾರೆ. 85 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು ಮಾತ್ರ ಅಂಚೆ ಮತಪತ್ರದ ಮೂಲಕ ಮತದಾನ ಮಾಡಲು ಅವಕಾಶವಿದೆ. ವಿಕಲ ಚೇತನರು ಸಹ ಶೇ.40ಕ್ಕಿಂತ ಹೆಚ್ಚಿನ ಅಂಗವೈಕಲ್ಯ ಹೊಂದಿರಬೇಕು. ಮತಗಟ್ಟೆ ಅಧಿಕಾರಿಗಳು ತಮ್ಮ ಮನೆ ಮನೆಗೆ ಭೇಟಿ ನೀಡಿದಾಗ ಇಚ್ಚೆವುಳ್ಳ ಮತದಾರರು ನಮೂನೆ 12ನ್ನು ಭರ್ತಿ ಮಾಡಿ ಚುನಾವಣೆ ಅಧಿಸೂಚನೆ ದಿನಾಂಕದಿಂದ 5 ದಿನಗಳ ಒಳಗೆ ಚುನಾವಣಾಧಿಕಾರಿಗಳಿಗೆ ತಲುಪಿಸಬೇಕು ಎಂದರು.

ಒಂದು ಬಾರಿ ನಮೂನೆ 12ನ್ನು ಭರ್ತಿ ಮಾಡಿ ಮನೆಯಲ್ಲಿ ಮತದಾನ ಮಾಡಲು ಒಪ್ಪಿಗೆ ನೀಡಿದ ಮತದಾರರು ಯಾವುದೇ ಕಾರಣಕ್ಕೂ ಮತಗಟ್ಟೆಯಲ್ಲಿ ಚುನಾವಣೆ ದಿನ ಮತದಾನ ಮಾಡಲು ಅವಕಾಶವಿರುವದಿಲ್ಲವೆಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

# ಆಯೋಗದ ನಿಯಮದಂತೆ ಚುನಾವಣೆ ನಡೆಯಲಿದೆ




**ರಬಕವಿ–ಬನಹಟ್ಟಿ :** ಬಾಗಲಕೋಟೆ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ತೇರದಾಳ ವಿಧಾನಸಭಾ ಕ್ಷೇತ್ರದಲ್ಲಿ ಯಾವುದೇ ಗೊಂದಲಗಳಿಗೆ ಅವಕಾಶ ನೀಡದೇ, ಆಯೋಗದ ನಿಯಮದಂತೆ ಚುನಾವಣೆ ನಡೆಯಲಿದೆ ಎಂದು ವಿಶೇಷ ಜಿಲ್ಲಾಧಿಕಾರಿ ಹಾಗೂ ತೇರದಾಳ ಮತಕ್ಷೇತ್ರದ ಸಹಾಯಕ ಚುನಾವಣಾಧಿಕಾರಿ ಸಾಜೀದ್ ಅಹಮದ್ ಮುಲ್ಲಾ ಹೇಳಿದರು.

ರಬಕವಿ–ಬನಹಟ್ಟಿ ತಹಶೀಲ್ದಾರ ಕಚೇ–ರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತೇರದಾಳ ವಿಧಾನಸಭೆ ಕ್ಷೇತ್ರದಲ್ಲಿ ಒಟ್ಟು 2,32,869 ಮತದಾರರಿದ್ದಾರೆ. 1,15,654 ಪುರುಷ, 1,17,203 ಮಹಿಳಾ ಮತ್ತು 12 ತೃತೀಯ ಲಿಂಗಿಗಳು ತಮ್ಮ ಹಕ್ಕು ಚಲಾಯಿಸಲಿದ್ದಾರೆ. ನಗರ ಪ್ರದೇಶಗಳಲ್ಲಿ 236 ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 106 ಮತಗಟ್ಟೆಗಳಿವೆ. ಮಹಾಲಿಂಗಪುರದ ಕೆಂಗೇರಿಮಡ್ಡಿಯಲ್ಲಿ ಹೆಚ್ಚುವರಿ ಮತಗಟ್ಟೆ ನಿರ್ಮಾಣಗೊಳ್ಳಲಿದೆ.

26 ಸೂಕ್ಷ್ಮ ಮತ್ತು 210 ಸಾಮಾನ್ಯ ಮತಗಟ್ಟೆಗಳಿವೆ ಎಂದರು.

ಅಭ್ಯರ್ಥಿಗಳಿಗೆ ಏಪ್ರೀಲ್ 19 ರವರೆಗೆ ನಾಮಪತ್ರ ಸಲ್ಲಿಕೆ ಹಾಗೂ ಏಪ್ರೀಲ್ 22 ರಂದು ನಾಮಪತ್ರ ವಾಪಸ್ ಪಡೆಯಲು ಅವಕಾಶವಿದೆ. ಮೇ ಏಳರಂದು ಮತದಾನ ನಡೆಯಲಿದ್ದು, ಜೂನ್ – 4 ರಂದು ಮತ ಎಣಿಕೆ ಕಾರ್ಯ ನಡೆಯಲಿದೆ. ಕಳೆದ ನಾಲ್ಕು ದಿನಗಳಿಂದ ನಮ್ಮ ಅಧಿಕಾರಿಗಳಿಂದ ರಾಜ–ಕೀಯ ಪಕ್ಷಗಳ ಜಾಹೀರಾತು ಬ್ಯಾನರ್, ಭಾವಚಿತ್ರಗಳನ್ನು ತೆರವುಗೊಳಿಸಲಾಗುತ್ತಿದೆ ಎಂದು ಹೇಳಿದರು.

ಕ್ಷೇತ್ರದಲ್ಲಿ ತಾಲೂಕು ನೋಡಲ್ ಅಧಿಕಾ–ರಿಯಾಗಿ ತಾಲೂಕು ಪಂಚಾಯತ್ ಇಓ ಸಿದ್ದಪ್ಪ ಪಟ್ಟಿಹಾಳ ಕಾರ್ಯ ನಿರ್ವಹಿಸಲಿದ್ದಾರೆ. ತೇರದಾಳ ಮೂರನೇ ಕಾಲುವೆ, ಬುದ್ನಿ , ಮಹಾಲಿಂಗಪುರ ಎ.ಪಿ.ಎಂ.ಸಿ. ಬಳಿ ಮೂರು ಚೆಕ್ ಪೋಸ್ಟಗಳು ದಿನದ ಇಪ್ಪತ್ನಾಲ್ಕು ಗಂಟೆ ಕಾರ್ಯನಿರ್ವಹಿಸಲಿವೆ. ಎರಡು ಭಾಗಗಳಲ್ಲಿ ಎರಡು ಸೂಕ್ಷ್ಮಾವಲೋಕನ ತಂಡಗಳು, ಸಂಚಾರಿ ಆರಕ್ಷಕ (ಫ್ಲೈಯಿಂಗ್ ಸ್ಕಾಡ್) ಆರು ಜನ ಸಿಬ್ಬಂದಿ ಇದ್ದಾರೆ. ಹದಿನೆಂಟು ಜನ ಸೆಕ್ಟರ್ ಅಧಿಕಾರಿಗಳು ಕಾರ್ಯ ನಿರ್ವಹಿಸಲಿದ್ದಾರೆ. ಅಭ್ಯರ್ಥಿಗಳ ಖರ್ಚು –ವೆಚ್ಚ ಅವಲೋಕನೆಗೆ ಪ್ರತ್ಯೇಕ ತಂಡವಿದೆ. ಹದಿನೆಂಟು ಜನ ವಲಯಾಧಿಕಾರಿಗಳಿದ್ದಾರೆ. ಹನ್ನೊಂದು ಜನ ವಿಶೇಷ ತರಬೇತುದಾರರು ಇದ್ದಾರೆ. ಎಲ್ಲ 236 ಮತಗಟ್ಟೆಗಳಲ್ಲಿ ಕುಡಿಯುವ ನೀರು, ವಿದ್ಯುತ್, ಶೌಚಾಲಯ, ರಸ್ತೆ, ರ್ಯಾಂಪ್, ಪೀಠೋಪಕರಣಗಳು ಇರಲಿವೆ ಎಂದರು.

ಸುವಿಧಾ ತತ್ರಾಂಶ ಬಳಸಿ ಅಭ್ಯರ್ಥಿಗಳು ತಮ್ಮ ಪ್ರಚಾರಕ್ಕೆ ಅನುಮತಿ ಪಡೆಯಲು ಏಕಗವಾಕ್ಷಿ ವ್ಯವಸ್ಥೆ ಜಾರಿಗೊಳಿಸಿದೆ. ದೂರು ನಿರ್ವಹಣೆಗೆ 1950 ಸಂಖ್ಯೆಗೆ, ಮತ್ತು ರಬಕವಿ–ಬನಹಟ್ಟಿ ತಹಶೀಲ್ದಾರ ಕಚೇರಿ ದೂರವಾಣಿ ಸಂಖ್ಯೆ 08353–230555 ಗೆ ಅಭ್ಯರ್ಥಿಗಳು, ಸಾರ್ವಜನಿಕರು ಮಾಹಿತಿಗಾಗಿ ಸಂಪರ್ಕಿಸಬಹುದಾಗಿದೆ. ಸಿವಿಜಿಲ್ ಆ?ಯಪ್ ಮೂಲಕ ಸಾರ್ವಜನಿಕರು ಚುನಾವಣಾ ಅವ್ಯವಹಾರಗಳ ಬಗ್ಗೆ ಆಯೋಗಕ್ಕೆ ಮಾಹಿತಿ ಸಲ್ಲಿಸಬಹುದು ಎಂದು ಸಾಜೀದ ಮುಲ್ಲಾ ಹೇಳಿದರು.

85 ವಯೋಮಾನ ಮೀರಿದ 1,471 ಜನ ಮತ್ತು 4,114 ಜನ ವಿಕಲಚೇತನರು ಇಚ್ಛಿಸಿದಲ್ಲಿ ಮನೆಯಲ್ಲೇ ಮತದಾನ ಮಾಡುವ ಅವಕಾಶವಿದೆ. ಸರ್ಕಾರಿ ಸೇವೆಯಲ್ಲಿ ಅಗತ್ಯ ಸೇವೆಗಾಗಿ ಬಳಕೆಯಾದ ಸಿಬ್ಬಂದಿಗೆ ಆಯಾ ಇಲಾಖೆಗಳ ಮುಖ್ಯಸ್ಥರ ದೃಢೀಕರಣ ಪತ್ರದ ಆಧಾರದಲ್ಲಿ ಮೂರು ದಿನಗಳ ಅವಧಿಯಲ್ಲಿ ಮತದಾನ ಮಾಡಲು ಅವಕಾಶವಿದೆ. ಸಖಿ, ಯುವ ಮತದಾರರು, ಮಾದರಿ ಮತಗಟ್ಟೆ, ಥೀಮ್ಸ್ ಬೇಸ್ಡ್ , ಪಿಡಬ್ಲೂಡಿ ಮತಗಟ್ಟೆಗಳು ಈ ಬಾರಿ ವಿಶೇಷ ಮತಗಟ್ಟೆಗಳಾಗಿವೆ. ಕ್ಷೇತ್ರದಲ್ಲಿ ಸುಲಲಿತ ಚುನಾವಣಾ ಕಾರ್ಯ ನಡೆಯಲು ನಾಗರಿಕರು ತಮ್ಮ ಜವಾಬ್ದಾರಿ ಮತ್ತು ಬದ್ಧತೆಯಿಂದ ಆಯೋಗದ ಸಿಬ್ಬಂದಿಗೆ ನೆರವಾಗುವಂತೆ ಕೋರಿದರು.

ಮಾಧ್ಯಮಗೋಷ್ಠಿಯಲ್ಲಿ ತಹಶೀಲ್ದಾರ ಗಿರೀಶ ಸ್ವಾದಿ, ಸಿ.ಪಿ.ಐ. ಸಂಜೀವ ಬಳಿಗಾರ, ಉಪತಹಶೀಲ್ದಾರ ಎಸ್. ಬಿ. ಕಾಂಬಳೆ ಉಪಸ್ಥಿತರಿದ್ದರು.

# ಪ್ರಧಾನಿ ಮೋದಿಯವರ ಸಾಧನೆಗಳನ್ನು ಮನೆ ಮನೆಗೆ ತಲುಪಿಸಿ




ರಬಕವಿ–ಬನಹಟ್ಟಿ: ಹತ್ತು ವರ್ಷಗಳಲ್ಲಿ ಪ್ರಧಾನಿ ಮೋದಿ ಭಾರತ ದೇಶವನ್ನು ವಿಶ್ವದ ಶ್ರೇಷ್ಠ ರಾಷ್ಟ್ರವನ್ನಾಗಿಸಿದ್ದಾರೆ. ಕೇಂದ್ರ ಸರ್ಕಾರ ದೇಶದ ಜನರಿಗೆ ಹತ್ತಾರು ಮಹತ್ವದ ಕಾರ್ಯಕ್ರಮಗಳನ್ನು ನೀಡುವುದರ ಮೂಲಕ ದೇಶದ ಜನ–ರಿಗೆ ಸಹಾಯವನ್ನು ಮಾಡಿದೆ. ದೇಶದ ಅಭಿವೃದ್ಧಿ ಮೋದಿಯವರಿಂದ ಮಾತ್ರ ಸಾಧ್ಯ ಎಂದು ಸಂಸದ ಪಿ. ಸಿ. ಗದ್ದಿಗೌಡರ ತಿಳಿಸಿದರು.

ಇತ್ತೀಚೆಗೆ ಅವರು ಇಲ್ಲಿನ ಭಾರತೀಯ ಜನತಾ ಪಕ್ಷದ ಕಾರ್ಯಾಲಯದಲ್ಲಿ ನಡೆದ ಕಾರ್ಯಕರ್ತರ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

ಶಾಸಕ ಸಿದ್ದೂ ಸವದಿ ಮಾತನಾಡುತ್ತ , ಮುಂದಿನ ದಿನಗಳು ಕಾರ್ಯಕರ್ತ–ರಿಗೆ ಅತ್ಯಂತ ಮಹತ್ವದ ದಿನಗಳಾಗಿವೆ. ನಾವೆಲ್ಲರೂ ಒಗ್ಗಟ್ಟಾಗಿ ಕೇಂದ್ರ ಮತ್ತು ಕರ್ನಾಟಕದಲ್ಲಿ ಆಡಳಿತ ನಡೆಸಿದ ಬಿಜೆಪಿ ಸರ್ಕಾರದ ಸಾಧನೆಗಳನ್ನು ಮನೆ ಮನೆಗೆ ತಲುಪಿಸುವ ಕಾರ್ಯವನ್ನು ಮಾಡಬೇಕು. ಭಾರತ ದೇಶ ಇಂದು ಪ್ರತಿಯೊಂದು ಕ್ಷೇತ್ರದಲ್ಲಿ ಮಹತ್ವದ ಸಾಧನೆಗಳನ್ನು ಮಾಡಿದೆ. ದೇಶದ ತುಂಬ ವಂದೇ ಭಾರತ ರೇಲ್ವೆಗಳು ಓಡಾಡುತ್ತಿವೆ. ವಿಮಾನ ನಿಲ್ದಾಣಗಳ ಸಂಖ್ಯೆ ಹೆಚ್ಚಾಗಿದೆ. ಮುಂದಿನ ದಿನಗಳಲ್ಲಿ ದೇಶದ ಅಭಿವೃದ್ಧಿಗಾಗಿ ಹೊಸ ಕಾರ್ಯಕ್ರಮಗಳನ್ನು ಕೂಡಾ ರೂಪಿಸಿದ್ದು, ಭಾರತ ಇನ್ನು ಕೆಲವೇ ದಿನಗಳಲ್ಲಿ ವಿಶ್ವದ ಶ್ರೇಷ್ಠ ಆರ್ಥಿಕ ಶಕ್ತಿಯಾಗಿ ನಿರ್ಮಾಣಗೊಳ್ಳಲಿದೆ. ಆದ್ದರಿಂದ ಈ ಬಾರಿ ಮತ್ತೊಮ್ಮೆ ಮೋದಿಯವರನ್ನು ಪ್ರಧಾನಿಯನ್ನಾಗಿಸುವ ಜವಾಬ್ದಾರಿ ಪಕ್ಷದ ಕಾರ್ಯಕರ್ತರ ಮೇಲಿದೆ ಎಂದು ಸಿದ್ದೂ ಸವದಿ ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಘಟಕದ ಅಧ್ಯಕ್ಷ ಶಾಂತಾಗೌಡ ಪಾಟೀಲ, ನಿಂಗರಾಜ ಪಾಟೀಲ, ಶಂಕರ ಹುನ್ನೂರ ಮಾತನಾಡಿದರು.

ರಾಜ್ಯ ಸಭಾ ಸದಸ್ಯ ನಾರಾಯಣಸಾ ಭಾಂಡಗೆ, ಶ್ರೀಶೈಲಗೌಡ ಬಿರಾದಾರ, ಧರೆಪ್ಪ ಉಳ್ಳಾಗಡ್ಡಿ, ರಾಜು ನಾಯ್ಕರ್, ಮಲ್ಲಯ್ಯ ಮುಗಳೂರುಮಠ, ಶ್ರೀಶೈಲ ಬೀಳಗಿ, ಪುಂಡಲೀಕ ಪಾಲಭಾವಿ, ಡಿ. ಆರ್. ಪಾಟೀಲ, ಬಸನಗೌಡ ಪಾಟೀಲ, ಮಹಾಂತೇಶ ಹಿಟ್ಟಿನಮಠ, ಸುರೇಶ ಅಕ್ಕಿವಾಟ, ಪವಿತ್ರಾ ತುಕ್ಕನ್ನವರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಏ.12 ರಂದು ಅಧಿಸೂಚನೆ ಪ್ರಕಟ; ಏ.19 ನಾಮಪತ್ರ ಸಲ್ಲಿಕೆ ಕೊನೆಯ ದಿನ; ಏ.22 ನಾಮಪತ್ರ ಹಿಂಪಡೆಯಲು ಕೊನೆಯದಿನ ಮೇ.7ರಂದು ಮತದಾನ; ಜೂ.4 ರಂದು ಮತ ಎಣಿಕೆ: ಜಿಲ್ಲಾ ಚುನಾವಣಾ ಅಧಿಕಾರಿ ದಿವ್ಯ ಪ್ರಭು



**ಧಾರವಾಡ :** ಭಾರತ ಚುನಾವಣಾ ಆಯೋಗವು ಇಂದು ಮಧ್ಯಾಹ್ನ ಲೋಕಸಭಾ ಸಾರ್ವತ್ರಿಕ ಚುನಾವಣೆ–2024 ಘೋಷಿಸಿ, ದಿನಾಂಕಗಳನ್ನು ಪ್ರಕಟಿಸಿದೆ. ಅದರಂತೆ ಧಾರವಾಡ ಲೋಕಸಭಾ ಮತಕ್ಷೇತ್ರಕ್ಕೆ ಸಾರ್ವತ್ರಿಕ ಚುನಾವಣೆ ಜರುಗಿಸಲು ಅಗತ್ಯ ಸಿದ್ದತೆಗಳನ್ನು ಮಾಡಿಕೊಳ್ಳಲಾಗಿದ್ದು, ಏಪ್ರಿಲ್ 12 ರಂದು ಅಧಿಸೂಚನೆ ಹೊರಡಿಸಲಾಗುವುದು ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಹೇಳಿದರು.

ಅವರು ಇಂದು ಸಂಜೆ ಧಾರವಾಡ ಜಿಲ್ಲಾಧಿಕಾರಿಗಳ ಕಚೇರಿ ನೂತನ ಸಭಾಂಗಣದಲ್ಲಿ ಮಾಧ್ಯಮಗೋಷ್ಠಿ ಉದ್ದೇಶಿಸಿ, ಮಾತನಾಡಿದರು.

ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಧಾರವಾಡ ಲೋಕಸಭಾ ಮತಕ್ಷೇತ್ರದ ಸಾರ್ವತ್ರಿಕ ಚುನಾವಣೆಗೆ ಏ.12 ರಂದು ಅಧಿಸೂಚನೆ ಪ್ರಕಟಿಸಲಾಗುವುದು. ನಾಮಪತ್ರ ಸಲ್ಲಿಕೆಗೆ ಏ.19 ಕೊನೆಯ ದಿನವಾಗಿದೆ. ಏ.20 ರಂದು ನಾಮಪತ್ರ ಪರಿಶೀಲನೆ ಮತ್ತು ನಾಮಪತ್ರ ಹಿಂಪಡೆಯಲು ಏ.22 ಅಂತಿಮ ದಿನವಾಗಿರುತ್ತದೆ. ಮೇ.7ರಂದು ಮತದಾನ ಜರುಗಲಿದೆ. ಮತ್ತು ಜೂನ 4 ರಂದು ಮತ ಎಣಿಕೆ ಜರುಗಿ, ಜೂ.6 ಕ್ಕೆ ಚುನಾವಣಾ ಕಾರ್ಯ ಮುಕ್ತಾಯಗೊಳ್ಳಲಿದೆ ಎಂದು ಅವರು ತಿಳಿಸಿದರು.

*ಮತದಾರರು:* 11–ಧಾರವಾಡ ಲೋಕಸಭಾ ಮತಕ್ಷೇತ್ರ ವ್ಯಾಪ್ತಿಯಲ್ಲಿ ಧಾರವಾಡ ಜಿಲ್ಲೆಯ 7 ಹಾಗೂ ಹಾವೇರಿ ಜಿಲ್ಲೆಯ ಶಿಗ್ಗಾಂವ ಸೇರಿ ಒಟ್ಟು 8 ವಿಧಾನಸಭಾ ಮತಕ್ಷೇತ್ರಗಳು ಬರುತ್ತವೆ. 8,99,246 ಪುರುಷ, 8,92,043 ಮಹಿಳಾ ಹಾಗೂ 97 ಇತರೆ ಸೇರಿದಂತೆ ಒಟ್ಟು 17,91,386 ಮತದಾರರು ತಮ್ಮ ಮತದಾನದ ಹಕ್ಕು ಚಲಾಯಿಸಲಿದ್ದಾರೆ ಎಂದು ಅವರು ಹೇಳಿದರು.

*ಮತಗಟ್ಟೆಗಳು:* 11–ಧಾರವಾಡ ಲೋಕಸಭಾ ಮತಕ್ಷೇತ್ರದ ಚುನಾವಣೆಗೆ ಸಂಬಂಧಿಸಿದಂತೆ ಮತದಾನಕ್ಕಾಗಿ ಧಾರವಾಡ ಜಿಲ್ಲೆಯ ವಿಧಾನಸಭಾ ಮತಕ್ಷೇತ್ರಗಳ ವ್ಯಾಪ್ತಿಯಲ್ಲಿ 1652 ಮತ್ತು ಶಿಗ್ಗಾಂವ ವಿಧಾನಸಭಾ ಮತಕ್ಷೇತ್ರ ವ್ಯಾಪ್ತಿಯಲ್ಲಿ 241 ಮತಗಟ್ಟೆಗಳು ಸೇರಿದಂತೆ ಒಟ್ಟು 1893 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಹುಬ್ಬಳ್ಳಿ ಧಾರವಾಡ ಪೂರ್ವ ಮತ್ತು ಹುಬ್ಬಳ್ಳಿ ಧಾರವಾಡ ಕೇಂದ್ರ ವಿಧಾನಸಭಾ ವ್ಯಾಪ್ತಿಯಲ್ಲಿ ತಲಾ ಎರಡು ಮತ್ತು ಹುಬ್ಬಳ್ಳಿ ಧಾರವಾಡ ಪಶ್ಚಿಮ ವಿಧಾನಸಭಾ ಮತಕ್ಷೇತ್ರ ವ್ಯಾಪ್ತಿಯಲ್ಲಿ 4 ಸೇರಿ ಒಟ್ಟು 8 ಏಕ್ಸಿಲರಿ ಮತಗಟ್ಟೆಗಳನ್ನು ಸ್ಥಾಪಿಸಲು ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ದಿವ್ಯ ಪ್ರಭು ಅವರು ತಿಳಿಸಿದರು.

*ಯುವ, ವಿಕಲಚೇತನ,ವಯೋವೃದ್ದ ಮತದಾರರು:*

11– ಧಾರವಾಡ ಲೋಕಸಭಾ ಮತಕ್ಷೇತ್ರ ವ್ಯಾಪ್ತಿಯಲ್ಲಿ ಅಕ್ಟೋಬರ 27, 2023 ಕ್ಕೆ ಪ್ರಕಟಿಸಿರುವ ಕರಡು ಮತದಾರ ಪಟ್ಟಿಯಲ್ಲಿ 20,629 ಯುವ ಮತದಾರರಿದ್ದರು. ಮತದಾರ ಯಾದಿಯ ವಿಶೇಷ ಪರಿಷ್ಕರಣೆಯಲ್ಲಿ ಹೊಸದಾಗಿ ಸೇರ್ಪಡೆಗೊಂಡು ಜನವರಿ 22,2024 ಕ್ಕೆ ಪ್ರಕಟಿಸಿರುವ ಅಂತಿಮ ಮತದಾರಪಟ್ಟಿಯಲ್ಲಿ ಪ್ರಸ್ತುತ 31,412 ಯುವ ಮತದಾರರಿದ್ದಾರೆ. ಇದರಲ್ಲಿ ಮತದಾರ ವಿಶೇಷ ಪರಿಷ್ಕರಣೆ 2024 ರಲ್ಲಿ ಹೊಸದಾಗಿ 10,783 ಯುವ ಮತದಾರರು ಸೇರ್ಪಡೆ ಗೊಂಡಿದ್ದಾರೆ. 20,474 ವಿಕಲಚೇತನ ಮತದಾರರು ಹಾಗೂ 85 ವಯಸ್ಸಿನ ಮತ್ತು 85 ವಯಸ್ಸು ದಾಟಿರುವ 15,833 ಮತದಾರರು ನಮ್ಮ ಚುನಾವಣಾ ಕ್ಷೇತ್ರ ವ್ಯಾಪ್ತಿಯಲ್ಲಿ ಇದ್ದಾರೆ ಎಂದು ಅವರು ಹೇಳಿದರು.

2014, 2019 ರ ಲೋಕಸಭಾ ಹಾಗೂ 2023 ರ ವಿಧಾನಸಭಾ ಚುನಾವಣೆಯ ಶೇ.ವಾರು ಮತದಾನ ವಿವರ: ಧಾರವಾಡ ಲೋಕಸಭಾ ಮತಕ್ಷೇತ್ರದ ಸಾರ್ವತ್ರಿಕ ಚುನಾವಣೆ 2014 ರಲ್ಲಿ ಶೇ. 65.99 ರಷ್ಟು ಮತದಾನವಾಗಿತ್ತು. ಮತ್ತು 2019ರ ಧಾರವಾಡ ಲೋಕಸಭಾ ಮತಕ್ಷೇತ್ರದ ಸಾರ್ವತ್ರಿಕ ಚುನಾವಣೆಯಲ್ಲಿ ಶೇ. 70.29 ರಷ್ಟು ಮತದಾನವಾಗಿತ್ತು. ಹಾಗೂ 2023 ರ ವಿಧಾನಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಶೇ. 73.45 ರಷ್ಟು ಮತದಾನವಾಗಿದೆ.

*ಧಾರವಾಡ ಲೋಕಸಭಾ ಮತಕ್ಷೇತ್ರದ ಸಹಾಯಕ ಚುನಾವಣಾಧಿಕಾರಿಗಳು:* ಜಿಲ್ಲಾ ಚುನಾವಣಾ ಅಧಿಕಾರಿಗಳು ಧಾರವಾಡ ಲೋಕಸಭಾ ಮತಕ್ಷೇತ್ರದ ಚುನಾವಣಾಧಿಕಾರಿಗಳಾಗಿದ್ದಾರೆ. ಮತ್ತು ಜಿಲ್ಲಾಧಿಕಾರಿಗಳ ಕಾರ್ಯಾಲಯದ ಚುನಾವಣಾ ಮತಕ್ಷೇತ್ರದ ಕಚೇರಿಯ ಸಹಾಯಕ ಚುನಾವಣಾಧಿಕಾರಿಯಾಗಿ ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ. ಅವರು ಕಾರ್ಯನಿರ್ವಹಿಸಲಿದ್ದಾರೆ.

ನವಲಗುಂದ ವಿಧಾನಸಭಾ ಮತಕ್ಷೇತ್ರದ ಸಹಾಯಕ ಚುನಾವಣಾ ಅಧಿಕಾರಿಯಾಗಿ ಭಾರತೀಯ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರದ ವಿಶೇಷ ಭೂ ಸ್ವಾಧೀನಾಧಿಕಾರಿ ದೇವರಾಜ ಆರ್., ಕುಂದಗೋಳ ವಿಧಾನ ಸಭಾ ಮತಕ್ಷೇತ್ರದ ಸಹಾಯಕ ಚುನಾವಣಾಧಿಕಾರಿಯಾಗಿ ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರುದ್ರೇಶ ಗಾಳಿ, ಧಾರವಾಡ ವಿಧಾನಸಭಾ ಮತಕ್ಷೇತ್ರದ ಸಹಾಯಕ ಚುನಾವಣಾಧಿಕಾರಿಯಾಗಿ ಧಾರವಾಡ ಉಪ ವಿಭಾಗಾಧಿಕಾರಿ ಶಾಲಂ ಹುಸೇನ, ಹುಬ್ಬಳ್ಳಿ ಧಾರವಾಡ ಪೂರ್ವ ವಿಧಾನಸಭಾ ಮತಕ್ಷೇತ್ರದ ಸಹಾಯಕ ಚುನಾವಣಾಧಿಕಾರಿಯಾಗಿ ಆಹಾರ, ನಾಗರಿಕ ಪೂರೈಕೆ ಹಾಗೂ ಗ್ರಾಹಕ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕ ವಿನೋದ ಹೆಗ್ಗಳಗಿ, ಹುಬ್ಬಳ್ಳಿ ಧಾರವಾಡ ಕೇಂದ್ರ ವಿಧಾನಸಭಾ ಮತಕ್ಷೇತ್ರದ ಸಹಾಯಕ ಚುನಾವಣಾಧಿಕಾರಿಯಾಗಿ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಆಯುಕ್ತ ಈಶ್ವರ ಉಳ್ಳಾಗಡ್ಡಿ, ಹುಬ್ಬಳ್ಳಿ ಧಾರವಾಡ ಪಶ್ಚಿಮ ವಿಧಾನಸಭಾ ಮತಕ್ಷೇತ್ರದ ಸಹಾಯಕ ಚುನಾವಣಾಧಿಕಾರಿಯಾಗಿ ಎನ್.ಡಬ್ಲ್ಯೂ.ಕೆ.ಎಸ್.ಆರ್.ಟಿ. ಸಿ ವ್ಯವಸ್ಥಾಪಕ ನಿರ್ದೇಶಕಿ ಪ್ರಿಯಾಂಗಾ ಎಂ., ಕಲಘಟಗಿ ವಿಧಾನಸಭಾ ಮತಕ್ಷೇತ್ರದ ಸಹಾಯಕ ಚುನಾವಣಾಧಿಕಾರಿಯಾಗಿ ಹೆಸ್ಕಾಂ ಪ್ರಧಾನ ವ್ಯವಸ್ಥಾಪಕ ಡಾ. ಸಿದ್ದು ಹುಲ್ಲೊಳ್ಳಿ, ಹಾಗೂ ಶಿಗ್ಗಾಂವಿ ಮತಕ್ಷೇತ್ರದ ಸಹಾಯಕ ಚುನಾವಣಾಧಿಕಾರಿಯಾಗಿ ಸವಣೂರು ಉಪ ವಿಭಾಗಾಧಿಕಾರಿ ಮಹಮ್ಮದ್ ಕೈಸರ್ ಅವರು ಕಾರ್ಯನಿರ್ವಹಿಸಲಿದ್ದಾರೆ ಎಂದು ಜಿಲ್ಲಾ ಚುನಾವಣಾಧಿಕಾರಿ ದಿವ್ಯ ಪ್ರಭು ಅವರು ತಿಳಿಸಿದರು.

*ಶೀಘ್ರ ಅರ್ಜಿ ವಿಲೇವಾರಿಗೆ ಸುವಿಧಾ:* ಧಾರವಾಡ ಲೋಕಸಭಾ ಮತಕ್ಷೇತ್ರ ವ್ಯಾಪ್ತಿಯಲ್ಲಿ ವಿವಿಧ ರಾಜಕೀಯ ಪಕ್ಷಗಳ ಸಭೆ, ಸಮಾರಂಭ, ವಾಹನ ಪರವಾನಿಗೆ ಇತ್ಯಾದಿಗಳಿಗಾಗಿ ಇಓಅಔಖಇ/ಖಗ–ಗಿಖಆಊಂ ತಂತ್ರಾಂಶದ ಮೂಲಕ ಸ್ವೀಕೃತವಾಗುವ ಅರ್ಜಿಗಳನ್ನು ಖುಟಿರಟಜ ಘುಟಿಜಠತಿ ಖಧಿಣಜಟ ಮೂಲಕ ಚುನಾವಣಾಧಿಕಾರಿಗಳ ಕಾರ್ಯಾಲಯದಿಂದ ಪರವಾನಿಗೆ ಪಡೆಯಬೇಕು. ಸುವಿಧಾ ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಿ, ನಿಗಧಿತ ಅವಧಿಯಲ್ಲಿ ಪರವಾನಿಗೆ ಪಡೆಯಬಹುದು ಎಂದು ಅವರು ತಿಳಿಸಿದರು.

*ಮಾದರಿ ನೀತಿ ಸಂಹಿತೆಯಡಿ ತಕ್ಷಣದ ಕ್ರಮಗಳು:* ಜಾಹಿರಾತು ಫಲಕ ತೆರವು: ವಿವಿಧ ಯೋಜನೆಗಳಡಿ ಅಳವಡಿಸಿರುವ ಪ್ರಚಾರ ಫಲಕಗಳನ್ನು ತಕ್ಷಣದಿಂದ ನಿಗಧಿತ ಅವಧಿಯಲ್ಲಿ ತೆರವುಗೊಳಿಸಲು ಕ್ರಮಕೈಗೊಳ್ಳಲಾಗಿದೆ. ಮತ್ತು ಕಚೇರಿ ವೇಬ್ ಸೈಟ್ ಗಳಲ್ಲಿನ ಎಲ್ಲ ರಾಜಕೀಯ ವ್ಯಕ್ತಿಗಳ ಭಾವಚಿತ್ರಗಳನ್ನು,ರಾಜಕೀಯ ಕಾರ್ಯಚಟುವಟಿಕೆಗಳನ್ನು ತೋರಿಸುವಂತ ಜಾಹೀರಾತು, ಮಾಹಿತಿಯನ್ನು ತೆಗೆದು ಹಾಕಲು ಇಲಾಖೆ ಅಧಿಕಾರಿಗಳಿಗೆ ಈಗಾಗಲೇ ಸೂಚಿಸಲಾಗಿದೆ ಎಂದು ಅವರು ತಿಳಿಸಿದರು.

ಸರ್ಕಾರಿ, ಖಾಸಗಿ ಹಾಗೂ ಸಾರ್ವಜನಿಕ ಸ್ವತ್ತುಗಳ ಮೇಲೆ ರಾಜಕೀಯ ಪಕ್ಷಗಳ ಪ್ರಚಾರ ಕುರಿತಾದ ಪೋಸ್ಟರ್ ಗಳನ್ನು ತಕ್ಷಣವೇ ತೆರವುಗೊಳಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಮತ್ತು ಸ್ಥಳಿಯ ಸಂಸಂಸ್ಥೆಗಳ ಮುಖ್ಯಸ್ಥರಿಗೆ ನಿರ್ದೇಶನ ನೀಡಲಾಗಿದೆ. ಎಲ್ಲ ನಾಮನಿರ್ದೇಶಿತ ಹಾಗೂ ರಾಜಕೀಯ ವ್ಯಕ್ತಿಗಳಿಗೆ ನೀಡಲಾಗಿರುವ ವಾಹನಗಳನ್ನು ತಕ್ಷಣ ಹಿಂಪಡೆಯಲು ಕ್ರಮವಹಿಸಲಾಗಿದೆ ಎಂದು ಅವರು ಹೇಳಿದರು.

ದೂರುಗಳ ನಿರ್ವಹಣೆಗೆ 1950 ಸಹಾಯವಾಣಿ ಮತ್ತು ಸಿ–ವಿಜಿಲ್ ಆಪ್: ಚುನಾವಣಾ ನಿಯಮ ಉಲ್ಲಂಘನೆ ಪ್ರಕರಣಗಳ ಕುರಿತು ಸ್ವೀಕೃತವಾಗುವ ದೂರುಗಳ ನಿರ್ವಹಣೆಗೆ ವಿಧಾನಸಭಾ ಕ್ಷೇತ್ರವಾರು ಸಹಾಯಕ ಚುನಾವಣಾಧಿಕಾರಿಗಳ ಕಚೇರಿಗಳಲ್ಲಿ ದಿನದ 24 ಗಂಟೆ ಕಾರ್ಯ ನಿರ್ವಹಿಸುವ ದೂರು ನಿರ್ವಹಣಾ ಕೇಂದ್ರಗಳನ್ನು ತೆರೆಯಲಾಗಿದೆ. ಮತ್ತು ಚುನಾವಣಾ ಸಹಾಯವಾಣಿ 1950 ಮತ್ತು ಸಿ–ವಿಜಿಲ್ ಆಪ್ ದಲ್ಲಿ ಬಂದ ದೂರುಗಳನ್ನು ನಿಗಧಿತ ಸಮಯದಲ್ಲಿ ನಿರ್ವಹಿಸಲಾಗುತ್ತದೆ. ಇದಕ್ಕೆ ಅಗತ್ಯವಿರುವ ಸಿಬ್ಬಂದಿಗಳನ್ನು ತರಬೇತಿ ನೀಡಿ, ಸಿದ್ದಗೊಳಿಸಲಾಗಿದೆ ಎಂದು ಅವರು ತಿಳಿಸಿದರು.

*ಕೇಂದ್ರೀಕೃತ ಕಂಟ್ರೋಲ್ ರೂಂ:* ಚುನಾವಣಾ ಕಾರ್ಯಗಳನ್ನು ನಿಯಮಾನುಸಾರ ಪರಿಣಾಮಕಾರಿಯಾಗಿ ಜರುಗಿಸಲು ಎಲ್ಲ ರೀತಿಯ ಚುನಾವಣಾ ತಂಡಗಳನ್ನು ಸಂಪರ್ಕಿಸಿ, ಸಮನ್ವಯ ಸಾಧಿಸಲು ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಕೇಂದ್ರೀಕೃತ ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಲಾಗಿದೆ. ನೊಡಲ್ ಅಧಿಕಾರಿಗಳು ಈ ಕೇಂದ್ರದಲ್ಲಿದ್ದು, ತಂಡಗಳ ಕಾರ್ಯನಿರ್ವಹಣೆಯನ್ನು ಪರಿಆಣಾಮಕಾರಿಗೊಳಿಸಲು ಸಲಹೆ, ಸೂಚನೆ ನೀಡಲಿದ್ದಾರೆ ಮತ್ತು ನಿಗಾವಹಿಸಲಿದ್ದಾರೆ ಎಂದು ಜಿಲ್ಲಾ ಚುನಾವಣಾಧಿಕಶರಿ ದಿವ್ಯ ಪ್ರಭು ಅವರು ತಿಳಿಸಿದರು.

*ವಿದ್ಯುನ್ಮಾನ ಮತಯಂತ್ರಗಳು:* ಧಾರವಾಡ ಲೋಕಸಭಾ ಚುನಾವಣೆಗಾಗಿ ಒಟ್ಟು 2295 ಸಿಯು, 3,284 ಬಿ.ಯು, 2410 ವಿ.ವಿ.ಪ್ಯಾಟ್ ಹೊಂದಿರುವ ವಿದ್ಯುನ್ಮಾನ ಮತ ಯಂತ್ರಗಳನ್ನು ಸಿದ್ದಗೊಳಿಸಲಾಗಿದೆ.

*ಪಿ.ಆರ್.ಓ, ಎಪಿಆರ್ ಓ, ಪಿಓ:* ಮತಗಟ್ಟೆಗಳಲ್ಲಿ ಕರ್ತವ್ಯ ನಿರ್ವಹಿಸಲು 1982 ಪಿ.ಆರ್ ಓ, 1982 ಎಪಿಆರ್ ಓ ಮತ್ತು 4163 ಜನ ಪಿಓಗಳನ್ನು ಹಾಗೂ 800 ಜನ ಮೈಕ್ರೋ ಆಬ್ಸರ್ವರ್, ಅಧಿಕಾರಿ, ದಿಬ್ಬಂದಿಗಳನ್ನು ನೇಮಿಸಲು ಯೋಜಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

*ಚುನಾವಣಾ ಅಕ್ರಮ ತಡೆಯಲು ಮತ್ತು ತೀವ್ರ ನಿಗಾ ವಹಿಸಲು ಚೆಕ್ ಪೋಸ್ಟ್ ಗಳ ಸ್ಥಾಪನೆ:*

ಧಾರವಾಡ ಲೋಕಸಭಾ ಸಾರ್ವತ್ರಿಕ ಚುನಾವಣೆ ಘೋಷಣೆಯಾದ ದಿನದಿಂದ ಚುನಾವಣೆ ಮುಕ್ತಾಯದವರೆಗೆ ಜಿಲ್ಲಾಗಡಿಯಲ್ಲಿ ಚೆಕ್ ಪೋಸ್ಟ್ ಗಳನ್ನು ತೆರೆಯಲಾಗಿದೆ. ಚುನಶವಣಾ ಅಕ್ರಮಗಳನ್ನು ತಡೆಗಟ್ಟಲು ಮತ್ತು ತೀವ್ರ ನಿಗಾವಹಿಸಲು ಚೆಕ್ ಪೋಸ್ಟ್ ತೆರೆಯಲಾಗಿದ್ದು, ಪಾಳೆಯಲ್ಲಿ ಕರ್ತವ್ಯ ನಿರ್ವಹಿಸಲು ಪೊಲೀಸ್, ಜಂದಾಯ, ಅರಣ್ಯ, ವಾಣಿಜ್ಯ ಮತ್ತು ಇತರ ಇಲಾಖೆಗಳ ಅಧಿಕಾರಿ ಸಿಬ್ವಂದಿಗಳನ್ನು ನೇಮಿಸಲಾಗಿದೆ.

ಮುಖ್ಯವಾಗಿ ನವಲಗುಂದ ತಾಲೂಕು ವ್ಯಾಪ್ತಿಯ ರೋಣ ರಸ್ತೆಯ ರೋಣ ಕ್ರಾಸ್, ಅಣ್ಣಿಗೇರಿ – ಗದಗ ರಸ್ತೆಯ ಕೊಂಡಿಕೊಪ್ಪ ಕ್ರಾಸ್ ಹಾಗೂ ಹುಬ್ಬಳ್ಳಿ – ಅಣ್ಣಿಗೇರಿ ರಸ್ತೆಯಲ್ಲಿ ಚೆಕ್ ಪೋಸ್ಟ್ ಅಳವಡಿಸಲಾಗಿದೆ.

ಕುಂದಗೋಳ ತಾಲೂಕು ವ್ಯಾಪ್ತಿಯ ಕುಂದಗೋಳ – ಲಕ್ಷ್ಮೇಶ್ವರ ರಸ್ತೆಯ ಗುಡಗೇರಿ ಕ್ರಾಸ್, ಪೂನಾ – ಬೆಂಗಳೂರು ರಸ್ತೆಯ ತಡಸ ಕ್ರಾಸ್ ದಲ್ಲಿ ಮತ್ತು ಹುಬ್ಬಳ್ಳಿ– ಕುಂದಗೋಳ ರಸ್ತೆಯ ಶೇರೆವಾಡ ದಲ್ಲಿ ಚೆಕ್ ಪೋಸ್ಟ್ ಅಳವಡಿಸಲಾಗಿದೆ.

ಧಾರವಾಡ ಮತಕ್ಷೇತ್ರ ವ್ಯಾಪ್ತಿಯ ಉಪ್ಪಿನಬೆಟಗೇರಿ ಕ್ರಾಸ್, ಧಾರವಾಡ ಕೃಷಿ ವಿಶ್ವವಿದ್ಯಾಲಯ, ಹರೋಬೇಳವಡಿ, ಧಾರವಾಡ – ಸವದತ್ತಿ ರಸ್ತೆ, ಹೆಬ್ಬಳ್ಳಿ ಅಗಸಿ , ನವಲಗುಂದ ರಸ್ತೆ, ತೇಗೂರ್, ಎನ್. ಎಚ್ –4 ,ಬೆಳಗಾವಿ – ಧಾರವಾಡ ರಸ್ತೆಯಲ್ಲಿ ಚೆಕ್ ಪೋಸ್ಟ್ ಅಳವಡಿಸಲಾಗಿದೆ.

ಹುಬ್ಬಳ್ಳಿ – ಧಾರವಾಡ ಪಶ್ಚಿಮ ಮತಕ್ಷೇತ್ರ ವ್ಯಾಪ್ತಿಯ ಗಬ್ಬೂರು ಕ್ರಾಸ್, ಕಾರವಾರ ರಸ್ತೆ, ಸೋನಿಯಾ ಗಾಂಧಿ ನಗರ – ಕುಂದಗೋಳ ರಸ್ತೆಯಲ್ಲಿ ಚೆಕ್ ಪೋಸ್ಟ್ ಅಳವಡಿಸಲಾಗಿದೆ. ಹುಬ್ಬಳ್ಳಿ – ಧಾರವಾಡ ಕೇಂದ್ರ ಮತಕ್ಷೇತ್ರ ವ್ಯಾಪ್ತಿಯ ಗದಗ ರಸ್ತೆ, ನವಲಗುಂದ ರಸ್ತೆ, ಸುಳ್ಳದ ಕ್ರಾಸ್ ನಲ್ಲಿ ಚೆಕ್ ಪೋಸ್ಟ್ ಅಳವಡಿಸಲಾಗಿದೆ. ಹುಬ್ಬಳ್ಳಿ – ಧಾರವಾಡ ಪೂರ್ವ ಮತಕ್ಷೇತ್ರ ವ್ಯಾಪ್ತಿಯ ಗೋಕುಲ ಗ್ರಾಮದ ಕ್ರಾಸ್, ಕಲಘಟಗಿ ರಸ್ತೆ, ಗೋವಾ ರಸ್ತೆ ಹಾಗೂ ಹಳಿಯಾಳ ರಸ್ತೆಯಲ್ಲಿ ಚೆಕ್ ಪೋಸ್ಟ್ ಅಳವಡಿಸಲಾಗಿದೆ. ಕಲಘಟಗಿ ತಾಲೂಕು ಮತಕ್ಷೇತ್ರ ವ್ಯಾಪ್ತಿಯ ಕಲಘಟಗಿ – ಕಾರವಾರ ರಸ್ತೆಯ ಸಂಗಟಿಕೊಪ್ಪ ರಸ್ತೆ, ಅಳ್ನಾವರ, ಧಾರವಾಡ – ಗೋವಾ ರಸ್ತೆಯ ಕಡಬಗಟ್ಟಿ ಕ್ರಾಸ್ ಹಾಗೂ ತೊಬಕದಹೊನ್ನಳ್ಳಿ, ಕಲಘಟಗಿ – ತಡಸ ರಸ್ತೆಯಲ್ಲಿ ಚೆಕ್ ಪೋಸ್ಟ್ ಅಳವಡಿಸಲಾಗಿದೆ.

ಧಾರವಾಡ ಲೋಕಸಭಾ ಮತಕ್ಷೇತ್ರ ವ್ಯಾಪ್ತಿಯಲ್ಲಿ ಒಟ್ಟು 24 ಚೆಕ್ ಪೋಸ್ಟ್ ಗಳನ್ನು ಸ್ಥಾಪಿಸಲಾಗಿದ್ದು, ಗಸ್ತು, ನಿರಂತರ ನಿಗಾವಹಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಅವರು ಹೇಳಿದರು.

ಚುನಾವಣಾ ಕಾರ್ಯಗಳನ್ನು ಭಾರತ ಚುನಾವಣಾ ಆಯೋಗದ ಮಾರ್ಗಸೂಚಿ ಹಾಗೂ ನಿಯಮಗಳ ಅನುಸಾರ ಜರುಗಿಸಲು 141 ಸೆಕ್ಟರ್ ಆಫೀಸರ್(ಎಸ್ ಓ)ಟೀಮ್, 48 ಎಫ್.ಎಸ್.ಟಿ ಟೀಮ್, 120 ಎಸ್. ಎಸ್.ಟಿ.ಟೀಮ್, 14 ವಿಎಸ್ ಟಿ ಟೀಮ್, 21 ವಿವಿಟಿ ಟೀಮ್, 10 ಎಇಓ ಟೀಮ್ ಮತ್ತು 11 ಅಕೌಂಟ್ ಟೀಮ್ ಗಳನ್ನು ರಚಿಸಿ, ಕಾರ್ಯ ಹಂಚಿಕೆ ಮಾಡಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ದಿವ್ಯ ಪ್ರಭು ಅವರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಹಾನಗರ ಪೊಲೀಸ ಆಯುಕ್ತೆ ರೇಣುಕಾ ಸುಕುಮಾರ, ಜಿ.ಪಂ. ಸಿಇಓ ಸ್ವರೂಪ ಟಿ.ಕೆ., ಜಿಲ್ಲಾ ಪೊಲೀಸ ಅಧೀಕ್ಷಕ ಡಾ.ಗೋಪಾಲ ಬ್ಯಾಕೋಡ್, ಎನ್. ಡಬ್ಲ್ಯೂ.ಕೆ.ಎಸ್.ರ್ ಟಿಸಿಯ ವ್ಯವಸ್ಥಾಪಕ ನಿರ್ದೇಶಕಿ ಪ್ರಿಯಾಂಗಾ ಎಂ, ಉಪ ಪೊಲೀಸ ಆಯುಕ್ತ ರಾಜೀವ ಎಂ., ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ., ಮಹಾನಗರ ಪಶಲಿಕೆ ಆಯುಕ್ತ ಡಾ.ಈಶ್ವರ ಉಳ್ಳಾಗಡ್ಡಿ ಉಪಸ್ಥಿತರಿದ್ದರು.

# ಸಂಸ್ಥೆಯ ಏಳ್ಗೆಯೇ ಮೊದಲ ಗುರಿ: ಯಂಡಿಗೇರಿ



**ರಬಕವಿ :** ಸಂಸ್ಥೆಯ ಏಳ್ಗೆಯೇ ನನ್ನ ಮೊದಲ ಗುರಿಯಾಗಿದೆ. ನೌಕರರ ಹಿತ ಕಾಪಾಡುವುದರ ಜೊತೆಗೆ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಆದ್ಯತೆ ನೀಡುತ್ತೇನೆ ಎಂದು ಇಲ್ಲಿನ ರಬಕವಿ ಎಜ್ಯುಕೇಶನ್ ಸೊಸೈಟಿಯ ನೂತನ ಚೇರ್ಮನ್ ರಾಗಿ ಅಧಿಕಾರ ವಹಿಸಿಕೊಂಡ ಬಸವರಾಜ ಮಹಾದೇವಪ್ಪ ಯಂಡಿಗೇರಿ ಹೇಳಿದರು. ಮಾರ್ಚ್ 19 ರಂದು ಅವರು ರಬಕವಿಯ ಎಂ. ವ್ಹಿ. ಪಟ್ಟಣ ಸಂಂ–ಯುಕ್ತ ಪದವಿ ಪೂವ9 ಮಹಾವಿದ್ಯಾಲಯದಲ್ಲಿ ಏರ್ಪಡಿಸಿದ್ದ ಅಧಿಕಾರ ಸ್ವೀಕಾರ ಸಮಾರಂಭದಲ್ಲಿ ಮಾತನಾಡುತ್ತಿದ್ದರು. ಶಿಕ್ಷಕರು ತಮ್ಮ ಯಾವುದೇ ಸಮಸ್ಯೆ ಇದ್ದರೂ ನಿಸ್ಸಂಕೋಚವಾಗಿ ಹಂಚಿಕೊಳ್ಳಬೇಕು. ತಮ್ಮ ಕೋರಿಕೆಯಂತೆ ಕಲಿಕೋಪಕರಣಗಳನ್ನು ಸಂಸ್ಥೆ ಒದಗಿಸುತ್ತದೆ ಎಂದವರು ಹೇಳಿದರು. ನಿವೃತ್ತ ಉಪನ್ಯಾಸಕರು ಹಾಗೂ ಸಂಸ್ಥೆಯ ನಿರ್ದೇಶಕರಾದ ಪ್ರೊ. ಎಂ. ಎಸ್. ಬದಾಮಿ ಮಾತನಾಡುತ್ತ ಹಣ ಖರ್ಚು ಮಾಡಿದಷ್ಟು ಕಡಿಮೆಯಾಗುತ್ತದೆ. ವಿದ್ಯೆ ಹಂಚಿದಷ್ಟು ಹೆಚ್ಚಾಗುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಗಳ ಕಡೆಗೂ ಶಿಕ್ಷಕರು ಗಮನ ಹರಿಸಬೇಕು ಎಂದರು. ನಿರ್ದೇಶಕರಾದ ಚಿದಾನಂದ ಗಾಳಿ ಮಾತನಾಡುತ್ತ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ಒಂದೇ ಕುಟುಂಬದ ಸದಸ್ಯರಿದ್ದಂತೆ. ಒಟ್ಟಾಗಿ ಸೇರಿ ಒಮ್ಮತದಿಂದ ಶ್ರಮಿಸಿದಾಗ ವಿದ್ಯಾರ್ಥಿಗಳ ಏಳಿಗೆಯಾಗುತ್ತದೆ ಎಂದರು. ಕಾರ್ಯಕ್ರಮವನ್ನು ಯಶವಂತ ವಾಜಂತ್ರಿ ನಿರ್ವಹಿಸಿದರು. ಬಿ. ಎಸ್. ಪಾಟೀಲ ಸ್ವಾಗತಿಸಿದರು. ನಿರ್ದೇಶಕರಾದ ಈಶ್ವರ ಬೀಳಗಿ, ಶಿವಾನಂದ ಹೊಸಮನಿ, ಬಿ. ಎಮ್. ಮಟ್ಟಿಕಲ್ಲಿ, ಚಿದಾನಂದ ಸೊಲಾಪೂರ, ಎನ್. ಪಿ. ಬೋರಗಿನಾಯಕ, ರಾಚಪ್ಪ ಭಿಲವಡಿ, ಪದವಿ ಕಾಲೇಜಿನ ಪ್ರಾಚಾರ್ಯೆ ಆಶಾ ಮುದ್ದಾಪೂರ, ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಬಿ. ಎಸ್. ಕಾಂಬಳೆ, ಪ್ರೌಢ ಶಾಲೆಯ ಮುಖ್ಯ ಗುರು ಎಸ್. ಎಮ್. ತಳವಾರ, ಪಿ. ಎಚ್. ಪ್ರತಾಪ ಉಪಸ್ಥಿತರಿದ್ದರು. ಕೊನೆಯಲ್ಲಿ ಬಿ. ಜಿ. ದುಂಬಾಳಿ ವಂದಿಸಿದರು.

# ಸುಗಂಧಾದೇವಿ ಜಾತ್ರೆ: ನೀರು ಬಿಡುವಂತೆ ಮನವಿ ಸಮರ್ಪಿಸಿದ ಗ್ರಾಮಸ್ಥರು

**ರಾಯಬಾಗ :** ತಾಲೂಕಿನ ಸೌಂದತ್ತಿ ಗ್ರಾಮದ ಗ್ರಾಮ ದೇವತೆ ಸುಗಂಧಾದೇವಿ ಜಾತ್ರೆ ನಿಮಿತ್ಯ ಕೃಷ್ಣಾ ನದಿಗೆ ನೀರು ಬಿಡುವಂತೆ ಗ್ರಾಮ ಪಂಚಾಯತಿ ಸದಸ್ಯರು ಹಾಗೂ ಸುಗಂಧಾದೇವಿ ದೇವಸ್ಥಾನ ಕಮಿಟಿಯವರು ಚಿಕೋಡಿ ಉಪವಿಭಾಗಾಧಿಕಾರಿ ಮೆಹಬೂಬಿ ಅವರಿಗೆ ಇತ್ತೀಚೆಗೆ ಮನವಿ ಸಲ್ಲಿಸಿದರು.

ಗ್ರಾ.ಪಂ.ಅಧ್ಯಕ್ಷ ರಾಮಚಂದ್ರ ಕಾಟೆ ಮಾತನಾಡಿ, ಜಾತ್ರೆಗೆ ಆಗಮಿಸುವ ಸಾವಿರಾರು ಭಕ್ತರಿಗೆ ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿನ ಅಭಾವ ತಗ್ಗಿಸಲು ಹಾಗೂ

ನೀರಿನ ಸಮಸ್ಯೆ ಉಂಟಾಗದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಕೂಡಲೆ ಕೃಷ್ಣಾ ನದಿಗೆ ಮಹಾರಾಷ್ಟ್ರದ ಡ್ಯಾಂ ಗಳಿಂದ ನೀರು ಹರಿಸಬೇಕೆಂದು ಮನವಿ ಮಾಡಿಕೊಂಡರು.

ಉಪಾಧ್ಯಕ್ಷ ಅಜಾದ ತಾಶಿವಾಲೆ, ಧುಳಗೌಡ ಪಾಟೀಲ,ಕುಂತಿನಾಥ ಮಗದುಮ, ಅಣ್ಣಾಸಾಬ ಮಗದುಮ, ಕೇದಾರಿ ಡೊಂಗರೆ, ತಮ್ಮಾಣಿ ಹಂಜೆ, ಭೈರು ಚೌಗಲಾ, ಅರುಣ ಶಿಂದೆ, ಶ್ರೀಕಾಂತ ಮಂಗಸೂಳೆ, ಸುಭಾಷ ಹಂಜೆ, ಉತ್ತಮ ಕಾಮಾಗೌಡ, ರಮೇಶ ಬೆಳಗಲಿ ಹಾಗೂ ಪಂಚಾಯತ ಸದಸ್ಯರು, ಜಾತ್ರಾ ಕಮಿಟಿಯ ಸದಸ್ಯರು ಇದ್ದರು.

**ವರದಿ : ಡಾ. ಜಯವೀರ ಎ.ಕೆ. ಖೇಮಲಾಪುರ**

# ಈಗ 'ನಂದಿನಿ ಬೆಲ್ಲದ ಪೇಡಾ' ಮಾರುಕಟ್ಟೆಗೆ ಲಗ್ಗೆ






**ರಬಕವಿ–ಬನಹಟ್ಟಿ :** ಹಲವಾರು ಸಿಹಿ ಉತ್ಪನ್ನಗಳಿಂದ ಗ್ರಾಹಕರ ಮನ ಗೆದ್ದಿರುವ ಕೆಎಂಎಫ್ ಡಿಡಿಎಲ್ನ 'ನಂದಿನಿ' ಇದೀಗ ಬೆಲ್ಲದ ಪೇಡಾ ಉತ್ಪಾದನೆ ಮಾಡುವ ಮೂಲಕ ಅದಕ್ಕೆ ಎಲ್ಲಿಲ್ಲದ ಬೇಡಿಕೆ ಶುರುವಾಗಿದೆ.

ಈ ಕುರಿತು ರಬಕವಿ ಬನಹಟ್ಟಿ ತಾಲೂಕಿನ ಆಸಂಗಿಯ ಕೆಎಂಎಫ್ ಡಿಡಿ–ಎಲ್ನ ಆಡಳಿತ ವ್ಯವಸ್ಥಾಪಕ ಬಿ. ಎಸ್. ಸಿದ್ದೇಗೌಡ ಮಾತನಾಡಿ, ಬಾದಾಮ್ ಪೌಡರ್, ಜಾಮೂನ್, ಮಿಲ್ಲೆಟ್ ಮಿಕ್ಸ್, ಧಾರವಾಡ ಪೇಡಾ, ಮೈಸೂರ ಪಾಕ್, ಲಡಗಿ, ಶ್ರೀಖಂಡ ಸೇರಿದಂತೆ ಹಲವಾರು ಉತ್ಪನ್ನಗಳ ಬೆನ್ನಲ್ಲಿಯೇ ಜನತೆಯ ಬೇಡಿಕೆಗನುಸಾರವಾಗಿ 'ಬೆಲ್ಲದ ಪೇಡಾ' ಉತ್ಪನ್ನ ಮಾರುಕಟ್ಟೆಗೆ ಒದಗಿಸಲಾಗುತ್ತಿದ್ದು, ಉತ್ತಮ ಪ್ರತಿಕ್ರಿಯೆ ಸಿಹಿ ಪ್ರಿಯ–ರಿಂದ ದೊರಕುತ್ತಿರುವುದು ತಮಗೆ ಸಂತಸವೆನಿಸುತ್ತಿದೆ ಎಂದರು.

ರಾಜ್ಯದಲ್ಲಷ್ಟೆ ಅಲ್ಲದೆ ದೇಶಾದ್ಯಂತ ರಫ್ತು ಮಾಡುವಲ್ಲಿ ಯಶಸ್ಸು ಕಂಡಿದ್ದು , 200 ಗ್ರಾಂ ಪೇಡಾಗೆ 125 ರೂ.ಗಳಷ್ಟು ದರ ನಿಗದಿಪಡಿಸಲಾಗಿದೆ ಎಂದರು. ಇತ್ತೀಚೆಗೆ ಮುಖ್ಯಮಂತ್ರಿ ಸಿದ್ರಾಮಯ್ಯನವರು ಬೆಂಗಳೂರಿನ ಕೃಷ್ಣಾ ನಿವಾಸದಲ್ಲಿ 'ಬೆಲ್ಲದ ಪೇಡಾ' ಸಿಹಿಯನ್ನು ಲೋಕಾರ್ಪಣೆ ಮಾಡಿದ್ದರು. ಇದೀಗ ಆಸಂಗಿಯ ಕೆ–ಎಂಎಫ್ ಡಿಡಿಎಲ್ ಘಟಕದಿಂದ ಉತ್ಪನ್ನ ಶುರುವಾಗಿದೆಯೆಂದರು.

ಈ ಸಂದರ್ಭ ವ್ಯವಸ್ಥಾಪಕ ಬಿ. ಎಸ್. ತೆಗ್ಗಿ , ಮಾರುಕಟ್ಟೆ ಉಪ ವ್ಯವಸ್ಥಾಪಕ ಪಿ. ನಟರಾಜ್, ಉತ್ಪಾದನಾ ಉಪ ವ್ಯವಸ್ಥಾಪಕ ಎನ್. ಲಿಂಗಪ್ಪ , ಗುಣ ನಿಯಂತ್ರಣ ಸಹಾಯಕ ವ್ಯವಸ್ಥಾಪಕಿ ಸುನೀತಾ, ಸಹಾಯಕ ಅಭಿಯಂತರ ರಾಘವೇಂದ್ರ ಜೋಷಿ, ಸಿದ್ದಾರೂಢ ತಳವಾರ, ಸತೀಶ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಮನಸ್ಸು ಅಂತರ್ಮುಖಿಯಾದರೆ ಜೀವನದಲ್ಲಿ ಸುಖ



**ರಬಕವಿ–ಬನಹಟ್ಟಿ :** ಇಂದ್ರೀಯಗಳ ಮೂಲಕ ಮನಸ್ಸನ್ನು ಸಮಚಿತ್ತ ವಾಗಿಟ್ಟುಕೊಂಡವರೆ ನಿಜವಾದ ಸುಖಿಯಾದ ವ್ಯಕ್ತಿಯಾಗಿರುತ್ತಾನೆ. ಮನಸ್ಸು ಅಂತರ್ಮುಖಿಯಾದರೆ ಜೀವನದಲ್ಲಿ ಸುಖವನ್ನು ಪಡೆದುಕೊಳ್ಳಬಹುದಾಗಿದೆ ಮತ್ತು ವ್ಯಕ್ತಿ ಬಹಿರ್ಮುಖಿಯಾದರೆ ಜೀವನದಲ್ಲಿ ದುಃಖವನ್ನು ಅನುಭವಿಸಬೇಕಾಗುತ್ತದೆ ಎಂದು ಬಸವ ಬೆಳವಿಯ ಚರಂತೇಶ್ವರ ಮಠದ ಶರಣ ಬಸವ ದೇವರು ನುಡಿದರು.

ಮಂಗಳವಾರ ಬನಹಟ್ಟಿಯ ಈಶ್ವರಲಿಂಗ ಮೈದಾನದಲ್ಲಿ ಮಹಾಂತ ಮಂದಾರ ಮಠದ ದಶಮಾನೋತ್ಸವ ಅಂಗವಾಗಿ ಹಮ್ಮಿಕೊಂಡ ಪ್ರವಚನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜಮಖಂಡಿಯ ಓಲೆಮಠದ ಅಭಿನವ ಚನ್ನಬಸವ ಸ್ವಾಮೀಜಿ ಮಾತನಾಡಿ, ನಾವೆಲ್ಲರೂ ಶರಣರ ವಚನಗಳನ್ನು ಅರಗಿಸಿಕೊಳ್ಳಬೇಕು. ವಚನಗಳ ಶಕ್ತಿ ಅಪಾರವಾಗಿದೆ. ಅವುಗಳನ್ನು ಓದುವುದರ ಮೂಲಕ ಅವುಗಳಲ್ಲಿಯ ಮಹತ್ವವನ್ನು ತಿಳಿದುಕೊಳ್ಳಬೇಕು. ಇವೆಲ್ಲವುಗಳಿಂದ ಅನುಭವ ಸಾಮಥ–ರ್ಯವನ್ನು ಪಡೆದುಕೊಳ್ಳಬಹುದಾಗಿದೆ. ಶರಣ ಸಿದ್ಧಾಂತ, ತತ್ವಗಳು ಶ್ರೇಷ್ಠವಾಗಿವೆ ಎಂದು ತಿಳಿಸಿದರು. ಜಗತ್ತಿನಲ್ಲಿ ಆಚಾರ, ಅದ್ವೈತ್ಯ ಮತ್ತು ಅನುಭಾವ ಪರಂಪರೆಗಳಿವೆ ಎಂದರು.

ಅಥಣಿ ತಾಲ್ಲೂಕಿನ ನದಿ ಇಂಗಳಗಾಂವದ ಸಿದ್ಧಲಿಂಗ ಸ್ವಾಮೀಜಿ ಮಾತನಾಡಿ, ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ದಿನನಿತ್ಯ ಭಗವಂತನ ನಾಮಸ್ಮರಣೆ ಮಾಡುವುದರ ಜೊತೆಗೆ ಶುದ್ಧವಾದ ಕಾಯಕವನ್ನು ತಮ್ಮದಾಗಿಸಿಕೊಳ್ಳಬೇಕು ಎಂದು ತಿಳಿಸಿದರು.

ಇಲಕಲ್ ದ ಚಿತ್ತರಗಿ ವಿಜಯ ಮಹಾಂತೇಶ ಸಂಸ್ಥಾನ ಮಠದ ಗುರುಮಹಾಂತ ಸ್ವಾಮೀಜಿ, ಶಿರೂರಿನ ಬಸವಲಿಂಗ ಸ್ವಾಮೀಜಿ, ರಬಕವಿಯ ಗುರುಸಿದ್ಧೇಶ್ವರ ಸ್ವಾಮೀಜಿ, ಮರೆಗುದ್ದಿಯ ಸಿದ್ಧರಾಮ ಸ್ವಾಮೀಜಿ, ಮಹಾಂತ ಮಂದಾರಮಠದ ಮಹಾಂತದೇವರು, ಶ್ರೀಶೈಲ ಧಬಾಡಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸದಾಶಿವ ಗಾಯಕವಾಡ, ರಾಮಣ್ಣ ಭದ್ರನವರ, ಶಂಕರ ಜಾಲಿಗಿಡದ, ಮಲ್ಲಿಕಾರ್ಜುನ ತುಂಗಳ, ವಿಠ್ಠಲ ಕಾಂಬಳೆ, ಶೈಲಜಾ ನುಚ್ಚಿ, ಮಹಾದೇವಿ ಕಾಡದೇವರ, ಪುಷ್ಪಾ ಸುಟ್ಟಟ್ಟಿ , ಮಹಾನಂದ ಕುಳ್ಳಿ ಹಾಜರಿದ್ದರು.

# ರಬಕವಿ–ಬನಹಟ್ಟಿಯಲ್ಲಿ ಕಲ್ಯಾಣೋತ್ಸವ: ಶೋಭಾ ರಥಯಾತ್ರೆ

**ರಬಕವಿ–ಬನಹಟ್ಟಿ :** ತಾಲೂಕಿನ ರಾಮಪೂರದ ದಾನೇಶ್ವರಿ ( ಬಿಳ್ಳೂರ ) ಕಲ್ಯಾಣ ಮಂಟಪದಲ್ಲಿ ಭ್ರಮರಾಂಭಾ ಮಲ್ಲಿಕಾರ್ಜುನರ ಕಲ್ಯಾಣೋತ್ಸವ ಕಾರ್ಯಕ್ರಮವು ಮಾರ್ಚ್ 21 ರಂದು ಸಂಜೆ ಐದು ಗಂಟೆಗೆ ಜರುಗಲಿದೆ ಎಂದು ಶ್ರೀಶೈಲ ಸೇವಾ ಸಮಿತಿಯ ಸೋಮಶೇಖರ ಭೂಯ್ಯಾರ ತಿಳಿಸಿದ್ದಾರೆ.

ಶ್ರೀಶೈಲ ದೇವಸ್ಥಾನದ ಸರ್ವ ಅರ್ಚಕರು ಹಾಗು ದೇವಸ್ಥಾನ ಟ್ರಸ್ಟಿನ ಎಲ್ಲ ಪದಾಧಿಕಾರಿಗಳ ಸಮ್ಮುಖದಲ್ಲಿ ನಡೆಯುವ ಕಲ್ಯಾಣೋತ್ಸವದಲ್ಲಿ ಜಿಲ್ಲೆಯ ವಿವಿಧ ಭಾಗಗಳಿಂದ ಸಾವಿರಾರು ದಂಪತಿಗಳು ಭಾಗವಹಿಸಿ ಮಲ್ಲಿಕಾರ್ಜುನ ದೇವರ ಆಶೀರ್ವಾದ ಪಡೆದುಕೊಳ್ಳಬೇಕೆಂದು ಮನವಿ ಮಾಡಿದ್ದಾರೆ.

ಸತತ ಎರಡನೇ ವರ್ಷದಲ್ಲಿ ಕಲ್ಯಾಣೋತ್ಸವ ಜರುಗುತ್ತಿರುವುದು ವಿಶೇಷವಾಗಿದೆ. ಕರ್ನಾಟಕದ ಭಕ್ತರಿಗಾಗಿ ವಿಜಯಪುರದಲ್ಲಿ ಈ ಕಾರ್ಯಕ್ರಮ ನೆರವೇರುತ್ತಿತ್ತು. ಭಕ್ತರ ಒತ್ತಾಯದ ಮೇರೆಗೆ ಎರಡನೇ ಬಾರಿಗೆ ರಬಕವಿ–ಬನಹಟ್ಟಿಯಲ್ಲಿ ಕಲ್ಯಾಣೋತ್ಸವ ಜರುಗುತ್ತಿರುವುದು ವಿಶೇಷ.

ಶೋಭಾ ರಥಯಾತ್ರೆ: ಇದಕ್ಕೂ ಪೂರ್ವದಲ್ಲಿ ಆಂಧ್ರದ ಸುಕ್ಷೇತ್ರ ಶ್ರೀಶೈಲ ಮಲ್ಲಿಕಾರ್ಜುನ ದೇವರ ಶೋಭಾ ರಥ–'ಯಾತ್ರೆಯು ಗುರುವಾರ ಬೆಳಿಗ್ಗೆ ಒಂಭತ್ತು ಗಂಟೆಗೆ ರಬಕವಿಯ ಮಲ್ಲಿಕಾರ್ಜುನ ದೇವಾಲಯದಿಂದ ಮೆರವಣಿಗೆಯು ಹೊರಟು ರಾಮಪೂರ ಮಾರ್ಗವಾಗಿ ಸುದೀರ್ಘ ಮೂರು ಕಿ.ಮೀ.ನಷ್ಟು ದೂರ ಸಾವಿರಾರು ಭಕ್ತರೊಂದಿಗೆ ಸುಮಾರು ನಾಲ್ಕು ಗಂಟೆಗಳ ಕಾಲ ಮೆರವಣಿಗೆ ಸಾಗಲಿದೆ.

ಮೆರವಣಿಗೆಯ ನೇತೃತ್ವವನ್ನು ಶ್ರೀಶೈಲ ಪೀಠದ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯರು ವಹಿಸುವರು. ಶ್ರೀಶೈಲ ಟ್ರಸ್ಟಿನ ಮುಖ್ಯ ಆಡಳಿತ ವ್ಯವಸ್ಥಾಪಕ ಡಿ. ಪೆದ್ದಿರಾಜು, ಐಎನ್ವಿ ಮೋಹನ್, ಜಿ. ಸ್ವಾಮುಲು, ಅರ್ಚಕರಾದ ಜಿ. ಆರ್. ಹರಿಶ್ಚಂದ್ರ ಮೌಳಿ, ಎಂ. ಶಿವಶಂಕರಯ್ಯ, ಎಂ. ಹರಿನಾಯಕ, ನಾಗರಾಜು ಶಾಸ್ತ್ರೀ, ಸೇರಿದಂತೆ ಅನೇಕರು ಆಗಮಿಸಲಿದ್ದಾರೆ.

# ಮಕ್ಕಳ ಕಾಯ್ದೆ ಅನುಷ್ಠಾನದಲ್ಲಿ ಮೂಲತತ್ವಗಳನ್ನು ಪಾಲಿಸಿ: ಶೇಖರಗೌಡ ರಮತ್ನಾಳ

**ಕೊಪ್ಪಳ :** ಮಕ್ಕಳಿಗೆ ಸಂಬಂಧಿಸಿದ ಕಾಯ್ದೆಗಳನ್ನು ಅನುಷ್ಠಾನಗೊಳಿಸುವಾಗ ಕಾಯ್ದೆಯ ಮೂಲತತ್ವಗಳನ್ನು ಪರಿಗಣಿಸಿ ಅನುಷ್ಠಾನಗೊಳಿಸಿ ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ಆಯೋಗದ ಸದಸ್ಯರಾದ ಶೇಖರಗೌಡ ಜಿ.ರಾಮತ್ನಾಳ ಅವರು ಹೇಳಿದರು.

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಬೆಂಗಳೂರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಯುನಿಸೆಫ್–ಮಕ್ಕಳ ಸಂರಕ್ಷಣಾ ಯೋಜನೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಬ್ರೈಟ್ ಇಂಡಿಯಾ ಸೊಸೈಟಿ, ಕೊಪ್ಪಳ ಇವರುಗಳ ಸಂಯುಕ್ತಾಶ್ರಯದಲ್ಲಿ ಶನಿವಾರದಂದು ಜಿಲ್ಲಾ ನಗರಾಭಿವೃದ್ಧಿ ಪ್ರಾಧಿಕಾರದ ಸಭಾಂಗಣದಲ್ಲಿ ಆಯೋಜಿಸಿದ್ದ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿಗಳು ಹಾಗೂ ಪೊಲೀಸ್ ಅಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ಭಾರತ ದೇಶವು ಸಹ ಅನುಮೋದಿಸಿದ್ದು, ಸರಕಾರ ಹಾಗೂ ಭಾರತ ಸಂವಿಧಾನದಲ್ಲಿ ಪ್ರದತ್ತವಾದ ಅಧಿಕಾರದನ್ವಯ ವಿಶೇಷ ಕಾಯ್ದೆಗಳನ್ನು ಜಾರಿಗೊಳಿಸಿದೆ. ಅವುಗಳಲ್ಲಿ ಮಕ್ಕಳ ನ್ಯಾಯ(ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ–2015, ತಿದ್ದುಪಡಿ–2021, ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯ್ದೆ–2012 ತಿದ್ದುಪಡಿ–2019 ಇನ್ನೂ ಮುಂತಾದವುಗಳುಜಾರಿಯಲ್ಲಿತಂದಿರುತ್ತದೆ. ಕಾಯ್ದೆಯ ಅನುಷ್ಠಾನದ ಸಂದರ್ಭದಲ್ಲಿ, ನಿರ್ಣಯಗಳನ್ನು ಕೈಗೊಳ್ಳುವ ಸಂದರ್ಭದಲ್ಲಿ ಮೂಲತತ್ವಗಳನ್ನು ಪರಿಗಣಿಸಿ ಅನುಷ್ಠಾನಗೊಳಿಸಿ ಎಂದು ಕಾಯ್ದೆಯಲ್ಲಿಯೇ ಹೇಳಿರುವ ಕಾಯ್ದೆ ಇದಾಗಿರುತ್ತದೆ ಎಂದು ಅವರು ಹೇಳಿದರು.

ಅಲ್ಲದೇ ಪೊಲೀಸ್ ಠಾಣೆಗಳು ಅಧಿಕಾರಿಗಳನ್ನುಮಕ್ಕಳಸ್ನೇಹಿಯನ್ನಾಗಿಸಲು ಕಾಯ್ದೆಯಲ್ಲಿಯೇ "ಮಕ್ಕಳ ವಿಶೇಷ ಪೊಲೀಸ್ ಘಟಕಗಳನ್ನಾಗಿ ಹಾಗೂ ಪ್ರತಿ ಠಾಣೆಯಲ್ಲೂ ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿಗಳನ್ನಾಗಿಸಿದೆ". ಕಾನೂನು ಸಂಘರ್ಷಕ್ಕೊಳಗಾದ ಹಾಗೂ ಪೋಷಣೆ ಮತ್ತು ರಕ್ಷಣೆ ಅವಶ್ಯವಿರುವ ಮಕ್ಕಳು ಅಥವಾ ಮಕ್ಕಳ ಪ್ರಕರಣಗಳು ನಿಮ್ಮ ಮುಂದೆ ಬಂದಾಗ, ಮಕ್ಕಳ ಸ್ನೇಹಿಯಾಗಿ ನಿರ್ವಹಿಸಿ. ಮಕ್ಕಳ ಮೇಲಿನ ಅಪರಾಧಗಳಿಗೂ ಸಹ ಶಿಕ್ಷೆಯನ್ನು ಈ ಕಾಯ್ದೆಯಡಿಯಲ್ಲಿ ನಿರೂಪಿತವಾಗಿವೆ ಹಾಗೂ ಮಿಷನ್ ವಾತ್ಸಲ್ಯ ಯೋಜನೆಯಡಿಯಲ್ಲಿ ಮಕ್ಕಳ ಸಹಾಯವಾಣಿ–1098ನ್ನು ತುರ್ತು ಪ್ರತಿಕ್ರಿಯೆ ಮತ್ತು ಬೆಂಬಲ ವ್ಯವಸ್ಥೆ (ಇ.ಆರ್.ಎಸ್.ಎಸ್)–112ರಡಿಯಲ್ಲಿ ತಂದಿದ್ದು, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ನಿರ್ವಹಣೆಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಪೋಷಣೆಮತ್ತುರಕ್ಷಣೆಅವಶ್ಯವಿರುವಮಕ್ಕಳ ಸಹಾಯಕ್ಕಾಗಿ ಮಕ್ಕಳ ಸಹಾಯವಾಣಿಗೂ ಸಹ ಕರೆ ಮಾಡಬಹುದಾಗಿದ್ದು, ಈ ಎರಡು ಘಟಕಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರೂಪಣಾಧಿಕಾರಿ ಗಂಗಪ್ಪ ಮಾತನಾಡಿ, ಮಕ್ಕಳ ರಕ್ಷಣಾ ನಿರ್ದೇಶನಾಲಯದಡಿಯಲ್ಲಿನ ಸೇವೆಗಳು ಹಾಗೂ ಪೊಲೀಸ್ ಇಲಾಖೆ, ಮಕ್ಕಳ ನ್ಯಾಯ(ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ–2015 ತಿದ್ದುಪಡಿ –2021ರ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ, ಮಕ್ಕಳ ರಕ್ಷಣೆಯನ್ನು ಸರಕಾರವು ಆದ್ಯತಾ ಮತ್ತು ತುರ್ತು ಸೇವೆ ಎಂದು ಗುರುತಿಸಿದೆ. ಕಾನೂನಿನೊಡನೆ ಸಂಘರ್ಷದಲ್ಲಿರುವ, ಪೋಷಣೆ ಮತ್ತು ರಕ್ಷಣೆ ಅವಶ್ಯವಿರುವ ಮಕ್ಕಳ ಪುನರವಸತಿಗಾಗಿ ಸರಕಾರವು "ಮಿಷನ್ ವಾತ್ಸಲ್ಯ" ಯೋಜನೆಯನ್ನು ಜಾರಿಗೊಳಿಸಿದ್ದು, ಯೋಜನೆಯ ಸಾಂಸ್ಥಿಕ ಸೇವೆಗಳಡಿಯಲ್ಲಿ ಬಾಲಕರ, ಬಾಲಕಿಯರ ಬಾಲಮಂದಿರ ಹಾಗೂ ದತ್ತು ಸೇವಾ ಕೇಂದ್ರಗಳು, ಅಸಾಂಸ್ಥಿಕ ಸೇವೆಗಳಡಿಯಲ್ಲಿ ಪ್ರಾಯೋಜಕತ್ವ, ಪೋಷಕತ್ವ, ನಂತರದ ಸೇವೆಗಳನ್ನು ನೀಡಲಾಗುತ್ತಿದೆ. ಆದ್ದರಿಂದ ನಿಮ್ಮ ವ್ಯಾಪ್ತಿಯಲ್ಲಿ ಪೋಷಣೆ ಮತ್ತು ರಕ್ಷಣೆ ಅವಶ್ಯವಿರುವ ಮಕ್ಕಳು ಕಂಡುಬಂದಲ್ಲಿ ಅಂತಹ ಮಗುವನ್ನು ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರುಪಡಿಸಿ ಎಂದು ವಿವರಿಸಿದರು.

ಯುನಿಸೆಫ್–ಮಕ್ಕಳ ಸಂರಕ್ಷಣಾ ಯೋಜನೆಯ ಪ್ರಾದೇಶಿಕ ಸಂಯೋಜ–ಕರಾದ ಡಾ. ಕೆ. ರಾಘವೇಂದ್ರ ಭಟ್ ಅವರು ಮಕ್ಕಳ ನ್ಯಾಯ(ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ–2015 ತಿದ್ದುಪಡಿ–2021ರ ಹಾಗೂ ಮಿಷನ್ ವಾತ್ಸಲ್ಯ ಕುರಿತು, ಯುನಿಸೆಫ್–ಮಕ್ಕಳ ಸಂರಕ್ಷಣಾ ಯೋಜನೆಯ ವ್ಯವಸ್ಥಾಪಕರಾದ ಹರೀಶ್ ಜೋಗಿ ಅವರು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ–2012 ಮತ್ತು ತಿದ್ದುಪಡಿ–2019ರಕುರಿತುತರಬೇತಿಯನ್ನು ನೀಡಿದರು. ಕಾರ್ಯಕ್ರಮದಲ್ಲಿ ಜಿಲ್ಲೆಯ ಎಲ್ಲಾ ಪೊಲೀಸ್ ಠಾಣೆಗಳ ಸಹಾಯಕ ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿಗಳು, ಶಿವಲೀಲಾ ವನ್ನೂರು, ಪ್ರತಿಭಾ ಕಾಶಿಮಠ, ಮಹಾಂತಸ್ವಾಮಿ ಪೂಜಾರ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಪ್ರಶಾಂತ ರಡ್ಡಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಸರ್ವತೋಮುಖ ಬೆಳವಣಿಗೆಗೆ ಕೊಪ್ಪಳ ವಿಶ್ವ ವಿದ್ಯಾಲಯದ ಸನ್ನದ್ಧ: ಕುಲಪತಿ ಮೇತ್ರಿ

**ಕೊಪ್ಪಳ :** ವಿಜಯನಗರ–ಕೊಪ್ಪಳ ಕನ್ನಡ ನಾಡಿಗೆ ವಿಶೇಷ ನೆರವಾಗಿದೆ. ಇಲ್ಲಿನ ಸಾಮ್ರಾಟ್ ಅಶೋಕನ ಮೂಲಕ ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಧರ್ಮ ಜ್ಞಾನ ಕೇಂದ್ರಗಳು ಆಶ್ರಯಿಸಿ, ಧರ್ಮವನ್ನು ಬಿತ್ತುತ್ತಿದ್ದಾರೆ. ಕೊಪ್ಪಳವು ಚಾರಿತ್ರಿಕ ಹಿನ್ನೆಲೆ ಹೊಂದಿದೆ ಎಂದು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೋ.ಕೆ.ಎಮ್. ಮೇತ್ರಿ ಅವರು ಅಭಿಪ್ರಾಯಪಟ್ಟರು.

ಕೊಪ್ಪಳ ವಿಶ್ವ ವಿದ್ಯಾಲಯದಲ್ಲಿ ಮಂಗಳವಾರ ನಡೆದ ಪ್ರಥಮ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮಕ್ಕೆ ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಕೊಪ್ಪಳವು ಸಹ ಕನ್ನಡಕ್ಕೆ ವಿಶೇಷ ಸ್ಥಾನಮಾನ ನೀಡಿದ ಭೂಮಿಯಾಗಿದೆ. ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿದ್ದೂ, ಹಾಗಾಗಿ ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ಮುನ್ನುಗ್ಗಲು ಹಾಗೂ ಈ ಭಾಗದ ಸರ್ವತೋಮುಖ ಬೆಳವಣಿಗೆಗೆ ಕೊಪ್ಪಳ ವಿಶ್ವ ವಿದ್ಯಾಲಯದ ಸನ್ನದ್ಧವಾಗಿದೆ. ಈ ಭಾಗದ ಶಿಕ್ಷಣ ಇನ್ನಷ್ಟು ಬೆಳವಣಿಗೆ ಯಾಗಲಿ ಎಂದರು.

ಗದುಗಿನ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ವಿಷ್ಣುಕಾಂತ್.ಎಸ್.ಚಟಪಲ್ಲಿ ಮಾತನಾಡಿ, ಕೊಪ್ಪಳ ವಿಶ್ವ ವಿದ್ಯಾಲಯದಿಂದ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗುವಂತಾಗಲಿ ಎಂದರು.

ಗೊಟಗೋಡಿ, ಶಿಗ್ಗಾಂವಿಯ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ಟಿ.ಎಂ.ಭಾಸ್ಕರ್ ಮಾತನಾಡಿ, ಸಂವಿಧಾನ ಆಶಯವನ್ನು ಜಾರಿಗೆ ತರುವ ಕೆಲಸವಾಗಬೇಕು. ಸಂವಿಧಾನ ಆಶಯದಂತೆ ನಾವೆಲ್ಲರೂ ನಡೆಯೋಣ ಎಂದರು.

ಹಾವೇರಿ ವಿಶ್ವ ವಿದ್ಯಾಲಯದ ಕುಲಪತಿಗಳಾದ ಪ್ರೊ.ಸುರೇಶ ಎಚ್. ಜಂಗಮಶೆಟ್ಟಿ ಮಾತನಾಡಿ, ದೇಶದಲ್ಲಿ ಕೊಪ್ಪಳ ವಿಶ್ವ ವಿದ್ಯಾಲಯ ಉತ್ತುಂಗಕ್ಕೆ ಏರಬೇಕು. ವಿಶ್ವ ವಿದ್ಯಾಲಯದ ಉದ್ದೇಶ ಈಡೇರಲಿ ಎಂದರು.ಬೀದರವಿಶ್ವವಿದ್ಯಾಲಯದಕುಲಪತಿಗಳಾದ ಪ್ರೊ.ಬಿ.ಎಸ್.ಬಿರಾದಾರ ಮಾತನಾಡಿ, ಜಿಲ್ಲೆಯ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಸಿಗಬೇಕು ಎಂಬ ಉದ್ದೇಶದಿಂದ ವಿಶ್ವ ವಿದ್ಯಾಲಯ ಸ್ಥಾಪನೆಯಾಗಿದೆ. ಹೊಸ ವಿಶ್ವ ವಿದ್ಯಾಲಯದ ಸ್ನಾತಕೋತ್ತರ ಶಿಕ್ಷಣದ ಜೊತೆಗೆ ಉದ್ದೇಶ ಕೌಶಲ್ಯ ಭರಿತಾದ ಕೋರ್ಸುಗಳನ್ನು ಪ್ರಾರಂಭಿಸಿ ಆ ಭಾಗದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗಬೇಕು, ಅವರರವರ ಭವಿಷ್ಯ ರೂಪಿಸಿಕೊಳ್ಳಬೇಕು. ಹೊಸ ವಿಶ್ವ ವಿದ್ಯಾಲಯದ ನಾಡಿನಲ್ಲಿಯೇ ಹೆಸರುವಾಸುವಂತಾಗಲಿ ಮಾಡೋಣ ಎಂದರು

ಕೊಡಗು ವಿಶ್ವ ವಿದ್ಯಾಲಯದ ಕುಲಪತಿಗಳಾದ ಪ್ರೊ.ಅಶೋಕ ಸಂಗಪ್ಪ ಆಲೂರು ಮಾತನಾಡಿ, ಈ ಭಾಗವು ಕಲ್ಯಾಣ ಕರ್ನಾಟಕ ಸಂತ ಮಹಾಂತರ ನಾಡಗಿದೆ. ಕೊಪ್ಪಳ ವಿಶ್ವ ವಿದ್ಯಾಲಯ ಒಂದು ವರ್ಷಗಳ ಗುಣಮಟ್ಟದ ಶಿಕ್ಷಣ ನೀಡಿದ ಸಾರ್ಥಕ ಗಳಿಗೆಯಾಗಿದೆ. ವಿದ್ಯಾರ್ಥಿಗಳ ಮನಸ್ಸಿನಲ್ಲಿ ಅತ್ಯುತ್ತಮವಾದ ಬೀಜ ಬಿತ್ತುವ ಮೂಲಕ ಕಳೆ, ಕಸವನ್ನೂ ಕಿತ್ತು ತೆಗೆದು, ಸಮೃದ್ಧಿಯ ನಾಗರಿಕರಾಗಿ ರೂಪಿಸುವ ಕನಸು ವಿಶ್ವ ವಿದ್ಯಾಲಯದ ಹೊಂದಿದೆ. ಇಲ್ಲಿನ ಶಿಕ್ಷಕರು ವಿದ್ಯಾರ್ಥಿಗಳಿಗೆ ಸೂಕ್ತವಾದ ಜ್ಞಾನ ನೀಡಬೇಕಿದೆ.

ಇಲ್ಲಿರುವ ವಿದ್ಯಾರ್ಥಿಗಳು ನಾಡಿನ ಸಂತರು, ಜ್ಞಾನಿಗಳು, ಪಂಡಿತರು, ದೇಶವನ್ನು ಆಳುವ ನಾಗರಿಕರಾಗಲು ಇಲ್ಲಿನ ಪ್ರಾಧ್ಯಾಪಕರು ಹಾಗೂ ಶಿಕ್ಷಕರು ಶ್ರಮಿಸಬೇಕು ನಾವೆಲ್ಲರೂ ಚಲಾವಣೆಯ ನಾಣ್ಯ ಹಾಗೂ ನೋಟುಗಳು ವಂತಾಗಬೇಕು. ವಿಶ್ವ ವಿದ್ಯಾಲಯದ ಕುಲಪತಿ ಪ್ರೊ.ಬಿ.ಕೆ.ರವಿ ಅವರು ಕ್ರಿಯಾಶೀಲ ರಾಗಿದ್ದು, ಅವರನ್ನು ನಿವೆಲ್ಲರೂ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಹಾಸನ ವಿಶ್ವ ವಿದ್ಯಾಲಯದ ಕುಲಪತಿಗಳಾದ ಪ್ರೊ. ತರೀಕೆರಿ ಸಿ. ತಾರಾನಾಥ ಮಾತನಾಡಿ, ಕೊಪ್ಪಳ ನಾಡು ಕಲ್ಯಾಣ ಕರ್ನಾಟಕದಲ್ಲಿ ಪ್ರಸಿದ್ಧಿ ಪಡೆದಿದೆ. ಜ್ಞಾನ ಎಲ್ಲರಿಗೂ ಸಿಗಬೇಕು. ಮನುಷ್ಯನ ಕ್ರಿಯಿಗೆ ಸೂರ್ಯನ ಶಕ್ತಿ ಆಧಾರವಾಗಿದೆ. ವಿಕಾಸದ ಹಾದಿಯಲ್ಲಿ ವಿವಿಧ ಸಂಘರ್ಷವನ್ನು ಎದುರಿಸಿ ಮನುಷ್ಯ ಮುಂದು ವರೆದಿದ್ದಾನೆ. ಮನುಷ್ಯನ ಮಾತ್ರ ಸಂವಹನ ಕಲೆ ಹಾಗೂ ಬುದ್ಧಿ ಶಕ್ತಿ ಇರುವುದು ಎಂದರು.

ಚಾಮರಾಜನಗರವಿಶ್ವವಿದ್ಯಾಲಯದಕುಲಪತಿಗಳಾದ ಪ್ರೊ. ಎಮ್.ಆರ್.ಗಂಗಾಧರ್ ಮಾತನಾಡಿ, ನೂತನ ವಿಶ್ವ ವಿದ್ಯಾಲಯದಿಂದ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಅನುಕೂಲವಾಗಿವೆ. ವಿಶೇಷ ಹೆಣ್ಣು ಮಕ್ಕಳನ್ನು ನಗರಗಳಿಗೆ ಉನ್ನತ ಶಿಕ್ಷಣ ಪಡೆಯಲು ಅವರ ಪಾಲಕರು ನಿರಾಕರಿಸುವುದು ಸಹಜವಾಗಿದೆ. ಆದರೆ ನೂತನ ವಿಶ್ವ ವಿದ್ಯಾಲಯದ ಜಿಲ್ಲೆಯ ಸ್ಥಾಪನೆ ಯಾಗವುದರಿಂದ ಇಲ್ಲಿನ ವಿದ್ಯಾರ್ಥಿಗಳಿಗೆ ಹಾಗೂ ಹೆಣ್ಣು ಮಕ್ಕಳು ಉನ್ನತ ಶಿಕ್ಷಣದ ಕನಸು ನನಸಾಗಿದೆ ಎಂದರು.

ವಿಜಯನಗರಶ್ರೀಕೃಷ್ಣದೇವರಾಯವಿಶ್ವವಿದ್ಯಾಲಯದ ಕುಲ ಸಚಿವರಾದ ಎಸ್.ಎನ್.ರುದ್ರೇಶ ಮಾತನಾಡಿ, ಜಾತಿ ಧರ್ಮದಲ್ಲಿ ವಿಶ್ವ ವಿದ್ಯಾಲಯ ಗಳು ಸೋರುಗುತ್ತಿವೆ. ಜಾತಿ ಧರ್ಮವನ್ನು ಮಕ್ಕಳು ಹೊರ ಬರಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಕೊಪ್ಪಳ ವಿಶ್ವ ವಿದ್ಯಾಲಯದ ಕುಲಪತಿಗಳಾದ ಪ್ರೊ.ಬಿ.ಕೆ.ರವಿ ಮಾತನಾಡಿ, ಕಳೆದ ಒಂದು ವರ್ಷದಿಂದ ಇಲ್ಲಿನ ಜನತೆ ಅನೇಕ ರೀತಿ ಪ್ರೋತ್ಸಾಹ ಹಾಗೂ ಸಹಕಾರ ನೀಡಿದಾರೆ. ಕೊಪ್ಪಳ ವಿಶ್ವ ವಿದ್ಯಾಲಯ ಬೆಳೆಯ ಬೇಕು ಎಂದರೆ ಜನ ಸಮುದಾಯದ ಸಹಕಾರ ಅಗತ್ಯ. ವಿಶ್ವ ವಿದ್ಯಾಲಯವನ್ನು ಬಲಿಷ್ಠ ಗೊಳಿಸೋಣ. ವಿಶ್ವ ವಿದ್ಯಾಲಯದಲ್ಲಿ ಒಂದು ಕುಟುಂಬ ದ್ದಂತೆ ಕೆಲಸ ಮಾಡುತ್ತಿದ್ದೇವೆ.ಕಲ್ಯಾಣ ಭಾಗವನ್ನು ಉತ್ತುಂಗಕ್ಕೆ ಏರುವ ಮಾಡೋಣ ಎಂದರು.

# ಸಂಭ್ರಮದಿಂದ ಸಸಾಲಟ್ಟಿ ಶಿವಲಿಂಗೇಶ್ವರ ರಥೋತ್ಸವ

**ತೇರದಾಳ :** ಸಸಾಲಟ್ಟಿ ಗ್ರಾಮದ ಆರಾಧ್ಯ ದೈವ ಶಿವಲಿಂಗೇಶ್ವರರ 66ನೇ ಪುಣ್ಯಾರಾಧನೆ ನಿಮಿತ್ತ ಮಂಗಳವಾರ ಸಂಜೆ ಶಿವಲಿಂಗೇಶ್ವರ ರಥೋತ್ಸವ ಸಂಭ್ರಮ ಸಡಗರದಿಂದ ಗ್ರಾಮದಲ್ಲಿ ಜರುಗಿತು.

ಶಿವಲಿಂಗೇಶ್ವರ ಮಠದ ಆವರಣದಲ್ಲಿ ಅಭಿನವ ರಾಚೋಟೇಶ್ವರ ಶ್ರೀಗಳ ನೇತೃತ್ವದಲ್ಲಿ ಮಹೇಶ ಹಿರೇಮಠ ರಥಕ್ಕೆ ಪೂಜೆ ಸಲ್ಲಿಸಿದರು. ಬಳಿಕ ನಂದಿಕೋಲು ಹಾಗೂ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ಗ್ರಾಮ ಪಂಚಾಯತಿ ಹತ್ತಿರ ಇರುವ ವಿರಭದ್ರೇಶ್ವರ ದೇವಸ್ಥಾನದ ವರೆಗೆ ನಡೆದ ಉತ್ಸವ ಅಲ್ಲಿ ಹಲವು ಧಾರ್ಮಿಕ ಕಾರ್ಯಕ್ರಮಗಳು ನಡೆದ ಬಳಿಕ ಪುನ: ಶಿವಲಿಂಗೇಶ್ವರ ಮಠಕ್ಕೆ ರಥ ಮರಳಿತು. ಬಿಸ್ಕತ್, ಬರ್ಫಿ, ಬೆಂಡು, ಉತ್ತತ್ತಿ ಬಾಳೆ ಹಣ್ಣು ರಥಕ್ಕೆ ಎಸೆದು ಭಕ್ತರು ಪರಾಕಷ್ಠೆಗೆ ಸಾಕ್ಷಿಯಾದರು. ಕರಡಿ ಮೇಳ, ಹಲಗೆ,



ಸಾಂಬಾಳ ಕಲಾವಿದರ ರಂಗು ಉತ್ಸವಕ್ಕೆ ಕಳೆ ನೀಡಿತು. ತೇರದಾಳ, ಗೋಲಭಾವಿ, ಕಾಲತಿಪ್ಪಿ, ಶೇಗುಣಸಿ, ಹಾರೂಗೇರಿ, ಯರಗಟ್ಟಿ ಮುಗಳಖೋಡ ಸೇರಿದಂತೆ ಬೇರೆ ಬೇರೆ ಊರುಗಳಿಂದ ಸಾವಿರಾರು ಸಂಖ್ಯೆಯಲ್ಲಿ ಭಕ್ತಾಧಿಗಳು ಆಗಮಿಸಿದ್ದರು.

ಗ್ರಾಮದ ಮುಸ್ಲಿಂ ಬಾಂಧವರು ಕೂಡ ದೇವಸ್ಥಾನಕ್ಕೆ ಆಗಮಿಸಿ ಉತ್ಸವದಲ್ಲಿ ಪಾಲ್ಗೊಳ್ಳುವ ಮೂಲಕ ಸೌಹಾರ್ದತೆಗೆ ಸಾಕ್ಷಿಯಾದರು. ಜಾತ್ರೆ ನಿಮಿತ್ತ ಶಿವಲಿಂಗೇಶ್ವರ ದೇವಸ್ಥಾನದಲ್ಲಿ ಬೆಳಗ್ಗೆ ರುದ್ರಾಭಿಷೇಕ, ವಿಶೇಷ ಅಲಂಕಾರಿತ ಪೂಜೆ, ಮಂಗಳಾರುತಿ, ತುಪ್ಪದಾರುತಿ ಸೇರಿದಂತೆ ಹಲವು ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಗಣಾರಾಧನೆ ಮುಗಿದ ಬಳಿಕ ಅನ್ನಪ್ರಸಾದಕ್ಕೆ ಚಾಲನೆ ನೀಡಲಾಯಿತು.

66ನೇ ಪುಣ್ಯಾರಾಧನೆ ನಿಮಿತ್ತ 9 ದಿನಗಳ ಕಾಲ ಪ್ರತಿದಿನ ಸಂಜೆ ಪ್ರವಚನ, ಭಜನೆ ಸೇರಿದಂತೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಚಿಮ್ಮಡದ ಪ್ರಭು ಶ್ರೀ, ಶೇಗುಣಸಿಯ ಡಾ. ಮಹಾಂತ ಪ್ರಭು, ರಬಕವಿಯ ಗುರುಸಿದ್ದೇಶ್ವರ ಶ್ರೀ, ಕಲ್ಮೇಶ್ವರ ಶರಣರು ಸೇರಿದಂತೆ ವಿವಿಧ ಮಠಾಧೀಶರು ಶರಣರು ಪ್ರವಚನದಲ್ಲಿ ಪಾಲ್ಗೊಂಡಿದ್ದರು.

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State